ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜುಲೈ 11, 2024

ಸಂಪುಟ : 51 ಸಂಚಿಕೆ : 58 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಡೆಂಗ್ಯೂ ಹೆಚ್ಚಾಗಿರುವ ರಾಜ್ಯಗಳ ಕಡೆ ಗಮನ

ನವದೆಹಲಿ, ಜು. 10 - ಡೆಂಗ್ಯೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ರಾಜ್ಯಗಳು ಹಾಗೂ ಪ್ರದೇಶಗಳ ಕಡೆ ಗಮನಹರಿಸಬೇಕು ಎಂದು ಹೇಳಿರುವ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ, ಡೆಂಗ್ಯೂ ತಡೆ ಹಾಗೂ ಅರಿವಿಗಾಗಿ ಸಹಾಯವಾಣಿ ತೆರೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ದೇಶಾದ್ಯಂತ ಉಂಟಾಗಿರುವ ಡೆಂಗ್ಯೂ ಪರಿಸ್ಥಿತಿ ಕುರಿತು ವಿವರ ಪಡೆಯಲು ಉನ್ನತ ಹಂತದ ಸಭೆ ನಡೆಸಿದ ಸಂದರ್ಭದಲ್ಲಿ ನಡ್ಡಾ ಈ ಸೂಚನೆ ನೀಡಿದ್ದಾರೆ.

ಎ.ಐ.ಐ.ಎಂ.ಎಸ್. ಹಾಗೂ ಎಲ್ಲಾ ಕೇಂದ್ರ ಸರ್ಕಾರದ ಆಸ್ಪತ್ರೆಗಳು ಡೆಂಗ್ಯೂ ವಾರ್ಡ್‌ಗಳನ್ನು ಸುಸಜ್ಜಿತವಾಗಿ ಇಟ್ಟುಕೊಳ್ಳಬೇಕು. ಅಗತ್ಯ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕು ಎಂದು ಹೇಳಿದರು.

ಸಮಯೋಚಿತ ಹಾಗೂ ಸಮನ್ವಯ ಕ್ರಮಗಳಿಂದಾಗಿ 1996ರಲ್ಲಿ 3.3ರಷ್ಟಿದ್ದ ಡೆಂಗ್ಯೂ ಸಾವಿನ ದರ ಈಗ 0.1ಕ್ಕೆ ಇಳಿಕೆಯಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

## ರೈತರ ಪ್ರತಿಭಟನೆ : ಹೆದ್ದಾರಿ ಬ್ಯಾರಿಕೇಡ್ ತೆರವಿಗೆ ಆದೇಶ

ಚಂಡಿಘಡ, ಜು. 10 - ಅಂಬಾಲಾದ ಶಂಭು ಗಡಿಯಲ್ಲಿ ಅಳವಡಿಸಲಾಗಿರುವ ಬ್ಯಾರಿಕೇಡ್ ಗಳನ್ನು ವಾರದಲ್ಲಿ ತೆರವುಗೊಳಿಸುವಂತೆ ಹರಿ ಯಾಣ ಸರ್ಕಾರಕ್ಕೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನಿರ್ದೇಶನ ನೀಡಿದೆ. ತಮ್ಮ ಬೇಡಿಕೆ ಗಳನ್ನು ಈಡೇರಿಸುವಂತೆ ರೈತರು ಫೆಬ್ರವರಿ 13 ರಿಂದ ಇಲ್ಲಿ ಬಿಡಾರ ಹೂಡಿ ದ್ದಾರೆ. ಅಂಬಾಲಾ-ನವದೆಹಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಹರಿಯಾಣ ಸರ್ಕಾರ ಬ್ಯಾರಿಕೇಡ್‌ಗಳನ್ನು ಅಳವಡಿಸಿದೆ. ಬೇಡಿಕೆಗಳ ಈಡೇರಿಕೆಗಾಗಿ ದೆಹಲಿ ಕಡೆ (4ನೇ ಪುಟಕ್ಕೆ)

# ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಸಿಆರ್‌ಪಿಸಿ 125ರ ಅನ್ವಯ ಜೀವನಾಂಶ

### ಸೆಕ್ಯುಲರ್ ಕಾನೂನು ಪಾಲನೆಯಾಗಲಿ ಎಂದು ಸುಪ್ರೀಂ ಮಹತ್ವದ ತೀರ್ಪು



ನವದೆಹಲಿ, ಜು. 10 - ಸಿ.ಆರ್.ಪಿ.ಸಿ.ಯ ಸೆಕ್ಷನ್ 125ರ ಅನ್ವಯ ಮುಸ್ಲಿಂ ಮಹಿಳೆ ಜೀವನಾಂಶ ಪಡೆಯ ಬಹುದು ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಧರ್ಮ ಭೇದವಿಲ್ಲದೇ ಎಲ್ಲ ಮಹಿಳೆಯರು ಜೀವ ನಾಂಶಕ್ಕೆ ಅರ್ಹರು ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ದೂರಗಾಮಿ ಪರಿಣಾಮ ಬೀರಲಿದೆ.

ವಿಚ್ಛೇದನದ ನಂತರ ಪತ್ನಿಗೆ ಜೀವನಾಂಶ ನೀಡಬೇಕು ಎಂಬ ನಿರ್ದೇಶನವನ್ನು ಪ್ರಶ್ನಿಸಿ ಮುಸ್ಲಿಂ ವ್ಯಕ್ತಿಯೊಬ್ಬರು ದಾಖಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದೆ. ಈ ತೀರ್ಪು ನೀಡಿದ ಪೀಠದಲ್ಲಿ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಆಗಸ್ಟೈನ್ ಜಾರ್ಜ್ ಮಸೀಹ್ ಅವರಿದ್ದಾರೆ.

125ನೇ ಸೆಕ್ಷನ್ ಕೇವಲ ವಿವಾಹಿತ ಮಹಿಳೆಯರಿಗಷ್ಟೇ ಅಲ್ಲದೇ, ಎಲ್ಲ ಮಹಿಳೆಯರಿಗೆ ಅನ್ವಯವಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ನಾಗರತ್ನ ಹಾಗೂ ಮಸೀಹ್ ಅವರು ಪ್ರತ್ಯೇಕ ಆದರೆ ಏಕರೂಪದ ತೀರ್ಪುಗಳಲ್ಲಿ ತಿಳಿಸಿದ್ದಾರೆ. ಜೀವನಾಂಶದ ಕಾನೂನು ಧರ್ಮ ಭೇದವಿಲ್ಲದೇ ಎಲ್ಲ ವಿವಾಹಿತ ಮಹಿಳೆಯರಿಗೆ ಅನ್ವಯವಾಗುತ್ತದೆ ಎಂದು ಪೀಠ ತಿಳಿಸಿದೆ.

ಸಶಕ್ತನಾಗಿರುವ ವ್ಯಕ್ತಿ ತನ್ನ ಪತ್ನಿ, ಮಕ್ಕಳು (4ನೇ ಪುಟಕ್ಕೆ)

### ವಿಚ್ಛೇದಿತ ಮುಸ್ಲಿಂ ಮಹಿಳೆಗೆ 2 ಕಾಯ್ದೆ

ನವದೆಹಲಿ, ಜು. 10 - ಸಿ.ಆರ್.ಪಿ.ಸಿ.ಯ ಸೆಕ್ಷನ್ 125 ಹಾಗೂ ಮುಸ್ಲಿಂ ಮಹಿಳಾ ವಿಚ್ಛೇದನ ಹಕ್ಕುಗಳ ರಕ್ಷಣೆ ಕಾಯ್ದೆ 1986 ಇವರೆಡೂ ಆಯ್ಕೆಗಳು ಮುಸ್ಲಿಂ ಮಹಿಳೆಗೆ ಲಭ್ಯವಿವೆ ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಮುಸ್ಲಿಂ ಮಹಿಳೆಯರ ಜೀವನಾಂಶ ಕುರಿತ ಪ್ರಕರಣದಲ್ಲಿ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಆಗಸ್ಟೈನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ಈ ನಿಲುವು ತಳೆದಿದೆ.

ಪತ್ನಿ, ಮಕ್ಕಳು ಹಾಗೂ ಪೋಷಕರ ಜೀವನಾಂಶಕ್ಕೆ (4ನೇ ಪುಟಕ್ಕೆ)

### ಶಾ ಬಾನೋ ಪ್ರಕರಣ ನೆನಪಿಸಿದ ತೀರ್ಪು

ನವದೆಹಲಿ, ಜು. 10 - ಮುಸ್ಲಿಂ ಮಹಿಳೆಯರು ಸಿ.ಆರ್.ಪಿ.ಸಿ.ಯ ಸೆಕ್ಷನ್ 125ರ ಅನ್ವಯ ಜೀವನಾಂಶ ಪಡೆಯಬಹುದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿರುವುದು 1985ರ ಶಾ ಬಾನೋ ಬೇಗಮ್ ಪ್ರಕರಣದ ನೆನಪುಗಳು ಮರುಕಳಿಸುವಂತೆ ಮಾಡಿದೆ. ಮುಸ್ಲಿಂ ಮಹಿಳೆಯರು ಜೀವನಾಂಶಕ್ಕೆ ಅರ್ಹರು ಎಂದು 1985ರಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದು ಸಿ.ಆರ್.ಪಿ.ಸಿ. ಸೆಕ್ಷನ್ 125 ಚರ್ಚೆಗೆ ಕಾರಣವಾಗಿತ್ತು.

ಮುಸ್ಲಿಂ ಮಹಿಳೆಯರು ವಿಚ್ಛೇದನದ ಮೂರು ತಿಂಗಳ (4ನೇ ಪುಟಕ್ಕೆ)

## ಭವಾನಿ ನಿರೀಕ್ಷಣಾ ಜಾಮೀನು ರದ್ದತಿಗೆ ಸುಪ್ರೀಂ ಕೋರ್ಟ್ ನಕಾರ




ನವದೆಹಲಿ, ಜು, 10 - ಲೈಂಗಿಕ ಪೀಡನೆಯ ಪ್ರಕರಣದಲ್ಲಿ ಸಿಲುಕಿ ಅಮಾನತ್ತುಗೊಂಡಿರುವ ಜೆ.ಡಿ.ಎಸ್. ಸಂಸದ ಪ್ರಜ್ವಲ್ ರೇವಣ್ಣ ತಾಯಿ ಭವಾನಿ ರೇವಣ್ಣ ಅವರಿಗೆ ಅಪಹರಣ ಪ್ರಕರಣದಲ್ಲಿ ನೀಡಲಾಗಿರುವ ನಿರೀಕ್ಷಣಾ (4ನೇ ಪುಟಕ್ಕೆ)

ತೃತೀಯ ಪುಣ್ಯಸ್ಮರಣೆ



ದಿ. ಶ್ರೀ ಜಿ.ಟಿ. ಸುರೇಶ್‌ರವರು
ಆಡಿಟರ್, ದಾವಣಗೆರೆ.
ನಮಗೆಲ್ಲರಿಗೂ ದಾರಿದೀಪವಾಗಿ, ಬದುಕಿಗೆ ಪ್ರೇರಕವಾಗಿ, ಭವಿಷ್ಯಕ್ಕೆ ಬೆಳಕಾಗಿ, ಆದರ್ಶರಾಗಿ ಬಾಳಿದ ನಿಮ್ಮ ನೆನಪು ಎಂದೆಂದಿಗೂ ನಮ್ಮಲ್ಲಿ ಶಾಶ್ವತ....
ಪತ್ನಿ : ಶ್ರೀಮತಿ ಗೀತಾ ಮಗ: ಜಿ.ಎಸ್. ಸುನೀಲ್
ಮಗಳು : ಡಾ. ಜಿ.ಎಸ್. ಸುಪ್ರಿಯಾ, ಸಹೋದರ : ಜಿ.ಟಿ. ಗೋಪಾಲ






# ಮೊಹರಂ : ಶಾಂತಿಗೆ ಭಂಗ ಬರದಂತೆ ಆಚರಿಸಲು ಕರೆ

## ಹರಿಹರದ ಸೌಹಾರ್ದ ಸಭೆಯಲ್ಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಡಿವೈಎಸ್ಪಿ ಬಸವರಾಜ್



ಹರಿಹರ, ಜು.10- ಮೊಹರಂ ಹಬ್ಬವನ್ನು ಹಿಂದೂ ಮತ್ತು ಮುಸ್ಲಿಂ ಸಮುದಾಯದ ಎಲ್ಲರೂ ಒಗ್ಗೂಡಿಕೊಂಡು ಆಚರಿಸುವಂತೆ ದಾವಣಗೆರೆ ಗ್ರಾಮಾಂತರ ಪೊಲೀಸ್ ಡಿವೈಎಸ್ಪಿ ಜಿ.ಎಸ್. ಬಸವರಾಜ್ ಕರೆ ನೀಡಿದರು.

ನಗರದ ವೃತ್ತ ನಿರೀಕ್ಷಕರ ಸಭಾಂಗಣದಲ್ಲಿ ಮೊಹರಂ ಹಬ್ಬದ ನಿಮಿತ್ತವಾಗಿ ಇಂದು ನಡೆದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅನೇಕ ಮಹಾತ್ಮರು ಗಣೇಶ ಚತುರ್ಥಿ, ರಂಜಾನ್, ಈದ್ ಮೀಲಾದ್, ಕ್ರಿಸ್ ಮಸ್ ಸೇರಿದಂತೆ ಹಲವಾರು ಹಬ್ಬಗಳನ್ನು ಜಾತಿ, ಭೇದ ಹಾಗೂ ವರ್ಗ, ಭೇದ ಭಾವನೆಗಳಿಲ್ಲದೇ ಎಲ್ಲರೂ ಒಂದಾಗಿ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಆ ದೃಷ್ಟಿಯಿಂದ ಕ್ರಾಂತಿಯ ವಿಚಾರಕ್ಕೆ ಯಾವುದೇ ರೀತಿಯ ಮಾನ್ಯತೆಯನ್ನು ನೀಡದೆ ಶಾಂತಿಯುತವಾಗಿ ಎಲ್ಲಾ ವರ್ಗದವರು ಹಬ್ಬಗಳನ್ನು ಆಚರಣೆ ಮಾಡಿದ್ದಲ್ಲಿ ಹಿರಿಯರು ಹಾಕಿಕೊಟ್ಟ ಮಾರ್ಗಕ್ಕೆ ಗೌರವ ನೀಡಿದಂತಾಗುತ್ತದೆ. ಜೊತೆಗೆ, ಧಾರ್ಮಿಕ ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವುದಕ್ಕೆ ದಾರಿಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ತ್ಯಾಗ, ಬಲಿದಾನದ ಮೊಹರಂ ಹಬ್ಬವನ್ನು ಮುಸ್ಲಿಂ ಸಮುದಾಯದವರು ಮಾತ್ರ ಆಚರಣೆ ಮಾಡದೇ ರಾಜ್ಯದ ಅನೇಕ ಭಾಗದಲ್ಲಿ ಹಿಂದೂ ಮತ್ತು ಮುಸ್ಲಿಂ ಸಮುದಾಯದವರು ಜೊತೆಯಲ್ಲಿ ಆಚರಿಸುತ್ತಾರೆ. ಈ ಪದ್ದತಿ ಪೂರ್ವಜರ ಕಾಲ ದಿಂದಲೂ ನಡೆದುಕೊಂಡು ಬಂದಿದ್ದು, ಇಂದಿನ ಯುವಕರೂ ಸಹ ಅದನ್ನು ಪಾಲಿಸಿಕೊಂಡು ಹೋದಾಗ ದೇಶದಲ್ಲಿ ಸಾಮರಸ್ಯ ಭಾವನೆಗಳು ಇನ್ನಷ್ಟು ಗಟ್ಟಿಗೊಳ್ಳಲು ಸಾಧ್ಯ ಎಂದರು.

ಪೊಲೀಸ್ ಇಲಾಖೆ ಜನರಿಗೆ ದಂಡ ಹಾಕಿ ರೆವಿನ್ಯೂ ಹೆಚ್ಚು ಮಾಡಬೇಕು ಎಂಬ ಉದ್ದೇಶ ಇರುವುದಿಲ್ಲ. ಪೊಲೀಸ್ ಇಲಾಖೆಯ ಉದ್ದೇಶ ಜನರು ನೆಮ್ಮದಿಯ ಜೀವನ ನಡೆಸಬೇಕು ಎಂಬ ಮನದಾಸೆಯನ್ನು ಹೊಂದಿರುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಯುವಕರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಇಲ್ಲದೇ ಇರೋದರಿಂದ ಅಡ್ಡ ದಾರಿಯನ್ನು ಹಿಡಿಯುವುದು ಸಹಜವಾಗಿದೆ. ಅದನ್ನು ತಪ್ಪಿಸುವ ಸಲುವಾಗಿ ಪೊಲೀಸ್ ಇಲಾಖೆ ಕೆಲವು ಕಠಿಣ ಕಾನೂನು ಕ್ರಮಗಳನ್ನು ಕೈಗೊಳ್ಳುವ ಅನಿವಾರ್ಯತೆ ಉಂಟಾಗುತ್ತದೆ. ಆದ್ದರಿಂದ ಅದಕ್ಕೆ ಅವಕಾಶವನ್ನು ಕೊಡದೆ ಕಾನೂನಿಗೆ ಎಲ್ಲರೂ ಗೌರವ ಕೊಡುವಂತೆ ಕಿವಿಮಾತು ಹೇಳಿದರು.

ಸಿಪಿಐ ಸುರೇಶ್ ಸರಗಿ ಮತ್ತು ಅಂಜುಮಾನ್ ಸಂಸ್ಥೆಯ ಸದಸ್ಯ ಫೈಯಾಜ್ ಸೇರಿದಂತೆ, ಇನ್ನಿತರರು ಮಾತನಾಡಿದರು.

ಈ ಸಂದರ್ಭದಲ್ಲಿ ಗುತ್ತೂರು ಠಾಣೆಯ ಪಿಎಸ್ಐ ಮಂಜುನಾಥ್ ಕುಪೇಲೂರು, ನಗರ ಠಾಣೆಯ ಶ್ರೀಪತಿ ಅಗ್ನಿ, ವಿಜಯಕುಮಾರ್, ಎಎಸ್ಐ ಗಳಾದ ರಾಜಶೇಖರಯ್ಯ, ಮನಸೂರ ಆಹ್ಮದ್, ಅಂಜುಮಾನ್ ಇಸ್ಲಾಮೀಯ ಸಂಸ್ಥೆಯ ಅಧ್ಯಕ್ಷ ಏಜಾಜ್ ಆಹ್ಮದ್, ಕಾರ್ಯದರ್ಶಿ ಆಸೀಫ್ ಜುನೇಧಿ, ಸದಸ್ಯ ಸನಾವುಲ್ಲಾ, ಸಾಬ್, ಮನಸೂರ ಮದ್ದಿ, ನಸ್ರೂಲ್ಲಾ, ಚಮನ್ ಸಾಬ್ ಮಲೆಬೆನ್ನೂರು, ಪೊಲೀಸ್ ಸಿಬ್ಬಂದಿಗಳಾದ ಅಂಜಾದ್, ಸತೀಶ್, ನಿಂಗರಾಜ್, ನಾಗರಾಜ್, ಕರಿಯಪ್ಪ, ಮರಳಸಿದ್ದಯ್ಯ, ಸಿದ್ದರಾಜ್, ಹೇಮಾ ನಾಯ್ಕ್, ತಿಪ್ಪೇಸ್ವಾಮಿ, ಸುನಿತಾ, ಕಾಳಮ್ಮ ಸುಜಾತ, ಕವಿತಾ, ಇತರರು ಹಾಜರಿದ್ದರು.

# ವೀರಶೈವ ಧರ್ಮ ವೃಕ್ಷದ ಬೇರು ರೇಣುಕರಾದರೆ ಆ ವೃಕ್ಷದ ಹಣ್ಣು ಬಸವಣ್ಣನವರು



ಹರಿಹರ, ಜು. 9 - ವೀರಶೈವ ಧರ್ಮದ ಇತಿಹಾಸ ಪರಂಪರೆ ಪ್ರಾಚೀನವಾದುದು. ವೀರಶೈವ ಧರ್ಮ ವೃಕ್ಷದ ಬೇರು ರೇಣುಕಾದಿ ಪಂಚಾಚಾರ್ಯರಾದರೆ, ಆ ಧರ್ಮ ವೃಕ್ಷದ ಹಣ್ಣು ಬಸವಣ್ಣನವರು ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ನಗರದ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರ ಹಳೇಪೇಟೆ ಶ್ರೀ ಬಸವೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಇಂದು ಜರುಗಿದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಸಕಲ ಜೀವಾತ್ಮರಿಗೆ ಸದಾ ಒಳಿತನ್ನೇ ಬಯಸಿದ ವೀರಶೈವ ಧರ್ಮಕ್ಕೊಂದು ಸಂವಿಧಾನವಿದೆ. 28 ಶಿವಾಗಮಗಳ ಉತ್ತರ ಭಾಗದಲ್ಲಿ ವೀರಶೈವ ಧರ್ಮದ ಹಿರಿಮೆ ಮತ್ತು ವಿಶ್ವ ಬಂಧುತ್ವದ ಚಿಂತನೆಗಳನ್ನು ಕಾಣಬಹುದು. ಈ 28 ಆಗಮಗಳ ಸಾರವನ್ನೊಳಗೊಂಡ ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರು ಮಹಾಮುನಿ ಅಗಸ್ತ್ಯರಿಗೆ ಬೋಧ ಮಾಡಿದ್ದಾರೆ. ಜಾತಿಗಿಂತ ನೀತಿ, ತತ್ವಕ್ಕಿಂತ ಆಚರಣೆ, ಶ್ರೇಷ್ಠ ಎಂಬುದನ್ನು ಅರಿಯಬೇಕಾಗುತ್ತದೆ ಎಂದರು.

ವೀರಶೈವ ಧರ್ಮ ಜಾತಿ, ಮತ, ಪಂಥಗಳ ಗಡಿ ಮೀರಿ ವಿಶ್ವ ಬಂಧುತ್ವದ ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸಿದೆ. ಪುಸ್ತಕದ ಪುಟ ಬದಲಾಯಿಸಬಹುದೇ ಹೊರತು, ಇತಿಹಾಸ ಪರಂಪರೆ ಮರೆ ಮಾಚುವುದು ಯಾರಿಂದಲೂ ಸಾಧ್ಯವಿಲ್ಲ. ಅಜ್ಞಾನ ಮನುಷ್ಯನನ್ನು ಸ್ವಾರ್ಥದ ಸೆಳೆತಗಳ ಸುಳಿಯಲ್ಲಿ ಸಿಲುಕಿಸುತ್ತದೆ ಎಂಬ ಮಾತಿನಂತೆ, ಕೆಲವರು ಸ್ವಾರ್ಥಕ್ಕಾಗಿ ಸಮಾಜವನ್ನು ಬಲಿ ತೆಗೆದುಕೊಳ್ಳುವುದು ಒಳಿತಾದುದಲ್ಲ. ನೂರು ಸಲ ಸುಳ್ಳು ಹೇಳಿದರೆ ಅದು ಸತ್ಯವಾಗಬಹುದೆಂಬ ಭ್ರಮೆ ಕೆಲವರಿಗುಂಟು. ಸಾವಿರ ಸಲ ಹೇಳಿದರೂ ಸುಳ್ಳು ಸುಳ್ಳೇ ಸತ್ಯ ಯಾವಾಗಲೂ ಸತ್ಯವೇ ಆಗಿರುತ್ತದೆ. ಜನ ಸಮುದಾಯದಲ್ಲಿ ತಪ್ಪು ಅಭಿಪ್ರಾಯ ಮೂಡಿಸುವ ಕೆಲವು ಮಠಾಧೀಶರ ಮತ್ತು ರಾಜಕೀಯ ವ್ಯಕ್ತಿಗಳ ಬಗೆಗೆ ಶ್ರೀ ಜಗದ್ಗುರುಗಳು ಅಸಮಾಧಾನ ವ್ಯಕ್ತಪಡಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಲಿಂ. ಹಾನಗಲ್ಲ ಕುಮಾರಸ್ವಾಮಿಗಳ ಆದರ್ಶ ಚಿಂತನೆಗಳನ್ನು ಬೆಳೆಸುವ ಮತ್ತು ಮೂಲ ಧ್ಯೇಯೋದ್ದೇಶಗಳಿಗೆ ಚ್ಯುತಿ ಬರದಂತೆ ಮುನ್ನಡೆಸಿಕೊಂಡು ಹೋಗುವ ಅಗತ್ಯವಿದೆ ಎಂದು ರಂಭಾಪುರಿ ಜಗದ್ಗುರುಗಳು ಹೇಳಿದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಾನವೀಯ ಸಂಬಂಧಗಳು ಶಿಥಿಲ ಗೊಳ್ಳುತ್ತಿರುವ ಇಂದಿನ ದಿನಗಳಲ್ಲಿ ಜನ ಸಮುದಾಯಕ್ಕೆ ಸಂಸ್ಕಾರ ಮತ್ತು ಆದರ್ಶ ಶಿಕ್ಷಣ ಕೊಡಿಸುವ ಅಗತ್ಯವಿದೆ. ಸತ್ಯದ ತಳಹದಿಯ ಮೇಲೆ ಸೈದ್ಧಾಂತಿಕ ನಿಲುವು ಗಟ್ಟಿಗೊಳ್ಳಬೇಕಾಗಿದೆ ಎಂದರು.

ಅ.ಭಾ.ವೀ. ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಬಿಜೆಪಿ ಧುರೀಣ ಚಂದ್ರಶೇಖರ ಪೂಜಾರ, ಕಾಂಗ್ರೆಸ್ ಮುಖಂಡ ಬಿ. ಹಾಲೇಶಗೌಡ, ತಪೋವನ ಛೇರ್ಮನ್ ಶಶಿಕುಮಾರ ಮೆಹರವಾಡೆ, ವೀರಶೈವ ಸಮಾಜದ ಧುರೀಣ ಕೊಂಡಜ್ಜಿ ಈಶ್ವರಪ್ಪ, ಮಲ್ಲಿಕಾರ್ಜುನ ಕಲ್ಮಠ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕು. ವರ್ಷಿಣಿ ಸಾಲಿಮಠ ಅವರಿಂದ ಭರತ ನಾಟ್ಯ ಜರುಗಿತು. ಕಾಂತರಾಜ ಮತ್ತು ವೀರೇಶ್ ಇವರಿಂದ ಪ್ರಾರ್ಥನಾ ಗೀತೆ ಜರುಗಿತು. ಹರಿಹರದ ಕುಮಾರಿ ಐಶ್ವರ್ಯ ಸ್ವಾಗತಿಸಿದರು. ಗುರುಬಸವರಾಜ ಮತ್ತು ಡಾ. ಶ್ವೇತಾ ಈಶ್ವರ ನಿರೂಪಿಸಿದರು.

ಇದೇ ಸಂದರ್ಭದಲ್ಲಿ 'ರಂಭಾಪುರಿ ಬೆಳಗು' ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ದಾವಣಗೆರೆಯ ಡಾ. ಸವಿತಾ ಮತ್ತು ಡಾ.ಮಹೇಶ್ ದಂಪತಿ ಅನ್ನ ದಾಸೋಹ ನೆರವೇರಿಸಿದರು.

> 9ನೇ ತರಗತಿಯ ಸಮಾಜ ವಿಜ್ಞಾನದಲ್ಲಿ ವೀರಶೈವ ಪದ ಕೈ ಬಿಟ್ಟಿರುವುದನ್ನು ಸರ್ಕಾರದ ಗಮನಕ್ಕೆ ತಂದು ಸರಿಪಡಿಸುವ ನಿಟ್ಟಿನಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಡಾ. ಶಾಮನೂರು ಶಿವಶಂಕರಪ್ಪ ಅವರು ಗಟ್ಟಿ ನಿರ್ಧಾರ ಕೈಗೊಳ್ಳಬೇಕು.
>
> **- ರಂಭಾಪುರಿ ಜಗದ್ಗುರುಗಳು**



# ಡೆಂಗ್ಯೂ : ಮುಂಜಾಗ್ರತೆ ವಹಿಸಬೇಕು

## ಜಗಳೂರು ಶಾಸಕ ಬಿ. ದೇವೇಂದ್ರಪ್ಪ ಅಧಿಕಾರಿಗಳಿಗೆ ತಾಕೀತು

ಜಗಳೂರು, ಜು. 10 - ಮಳೆಗಾಲದಲ್ಲಿ ಡೆಂಗ್ಯೂ ಜ್ವರ ಹರಡದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಬಿ. ದೇವೇಂದ್ರಪ್ಪ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಹೊರ ರೋಗಿಗಳ ವಾರ್ಡ್ ಗಳನ್ನು, ಲ್ಯಾಬೋ ರೇಟರಿ ಸೇರಿದಂತೆ ವಿವಿಧ ಪರೀಕ್ಷಾ ಕೋಠಡಿ ಗಳನ್ನು ವೀಕ್ಷಿಸಿ ಸ್ವಚ್ಛತೆ ಕಾಪಾಡಲು ಸೂಚಿಸಿದರು.

ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳು, ಸಿಬ್ಬಂದಿ ಗಳು, ಪ್ರತಿ ಪಿಎಚ್‌ಸಿ ಹಾಗೂ ಉಪಕೇಂದ್ರಗಳಲ್ಲಿ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು. ನಿರ್ಲಕ್ಷ್ಯಿಸಿದರೆ ಕ್ರಮ ಕೈಗೊಳ್ಳಬೇಕಾದೀತು ಎಂದರು.

**ಸಿಬ್ಬಂದಿಗಳ ಗೈರು ಕಂಡ ಶಾಸಕರು ಗರಂ :** ಆರೋಗ್ಯ ಇಲಾಖೆಯ ಸಿಬ್ಬಂದಿಗಳು ರಾಜಕೀಯದಲ್ಲಿ ತೊಡಗಿಕೊಂಡಿರುವ ದೂರುಗಳು ಜಿಲ್ಲಾ ಮಂತ್ರಿಗಳ ಗಮನಕ್ಕೆ ಬಂದಿದೆ ಅಂತಹವರನ್ನು ಕೂಡಲೇ ಅವರ ಕಾರ್ಯ ವ್ಯಾಪ್ತಿ ಸ್ಥಳಗಳಿಗೆ ಹಾಜರಾಗಲು ನೋಟಿಸ್ ಜಾರಿ ಮಾಡಿ, ಸೂಕ್ತ ಕ್ರಮಕೈಗೊಳ್ಳಿ ಇಲ್ಲವಾದರೆ ಜಾಗ ಖಾಲಿ ಮಾಡಿ ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ವಿಶ್ವನಾಥ್‌ಗೆ ಖಡಕ್ ಸೂಚನೆ ನೀಡಿದರು.

ಪಟ್ಟಣದಲ್ಲಿನ ಲ್ಯಾಬ್‌ಗಳಲ್ಲಿ ಸ್ವಚ್ಛತೆ ಕಾಪಾಡಬೇಕು ಹಾಗೂ ಮಹಿಳೆಯರಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು.ಇಲಾಖೆಯ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ನೋಟಿಸ್ ಜಾರಿ ಮಾಡಿ ಎಂದರು.

ಜನೌಷಧ ಕೇಂದ್ರ ಬಾಗಿಲು ಮುಚ್ಚಿರುವುದನ್ನು ಕಂಡು ಸರ್ಕಾರಿ ಆಸ್ಪತ್ರೆ ವ್ಯಾಪ್ತಿ ಸಮಯಕ್ಕೆ ಸರಿಯಾಗಿ ರೋಗಿಗಳಿಗೆ ಔಷಧಿ ವಿತರಣೆ ಮಾಡಲಿ ಇಲ್ಲವಾದರೆ ಸಂಪೂರ್ಣವಾಗಿ ಬಾಗಿಲು ಮುಚ್ಚಲು ತಿಳಿಸಿರಿ. ಅಲ್ಲದೆ ಮಳಿಗೆ ಮೇಲೆ ಸಂಪರ್ಕಿಸುವ ಸಮಯವನ್ನು ಏಕೆ ಬರೆಸಿಲ್ಲಾ ಎಂದು ಪ್ರಶ್ನಿಸಿದರು.

ಸಾರ್ವಜನಿಕ ಆಸ್ಪತ್ರೆ ಒಳ ರೋಗಿಗಳಿಗೆ ಸಮಯಕ್ಕೆ ಸರಿಯಾಗಿ ಗುಣಮಟ್ಟದ ಊಟದ ವ್ಯವಸ್ಥೆ ಒದಗಿಸಲು ಏಜೆನ್ಸಿಯವರಿಗೆ ತಿಳಿಸಬೇಕು ಎಂದು ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಷಣ್ಮುಖಪ್ಪ ಅವರಿಗೆ ತರಾಟೆಗೆ ತೆಗೆದುಕೊಂಡರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ವಿಶ್ವನಾಥ್ ಮಾತನಾಡಿ, ತಾಲ್ಲೂಕಿನಲ್ಲಿ 12 ಡೆಂಗ್ಯೂ ಪ್ರಕರಣಗಳು ಪತ್ತೆಯಾಗಿವೆ. ಆಶಾ ಕಾರ್ಯಕರ್ತೆಯರು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಪ್ರತಿ ಮನೆಗೆ ತೆರಳಿ ಲಾರ್ವ ಸಮೀಕ್ಷೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡ ವೆಂಕಟೇಶ್, ಬಿ. ಮಹೇಶ್ವರಪ್ಪ, ಸಿ. ಲಕ್ಷ್ಮಣ, ಹಟ್ಟಿ ತಿಪ್ಪೇಸ್ವಾಮಿ, ಪಲ್ಲಾಗಟ್ಟೆ ಶೇಖರಪ್ಪ, ಡಾ. ಮಂಜುನಾಥ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಷಣ್ಮುಖಪ್ಪ, ನೌಕರರ ಸಂಘದ ಅಧ್ಯಕ್ಷ ಸಿ.ಬಿ. ನಾಗರಾಜ್ ಸೇರಿದಂತೆ ವೈದ್ಯರುಗಳು ಹಾಜರಿದ್ದರು.

## ಹರಪನಹಳ್ಳಿ ತಾ. ವೀರಶೈವ ಮಹಾಸಭಾ ಅಧ್ಯಕ್ಷರಾಗಿ ರಾಜಶೇಖರ್

ಹರಪನಹಳ್ಳಿ,ಜು. 10 - ವೀರಶೈವ ಮಹಾಸಭಾದ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಪುರಸಭೆ ಮಾಜಿ ಅಧ್ಯಕ್ಷ ಎಂ. ರಾಜಶೇಖರ್ ಅವರು ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಚಿರಸ್ಥಳ್ಳಿಯ ಮಲ್ಲಿಕಾರ್ಜುನ ಕಲ್ಮಠ, ಎಲ್. ಕೊಟ್ರೇಶಪ್ಪ, ಸಿ.ಎಂ.ಕೊಟ್ರಯ್ಯ, ಎಚ್.ಎಂ.ಜಗದೀಶ, ದೊಡ್ಡಬಸವರಾಜ, ಪುರಸಭೆ ಸದಸ್ಯ ಗೊಂಗಡಿ ನಾಗರಾಜ, ಪಿ.ಬಿ.ಗೌಡ, ಪಿ.ಬಸವರಾಜ, ಮುನಿಯಪ್ಪ, ಕಾನಹಳ್ಳಿ ಪಿ. ರುದ್ರಪ್ಪ, ಕಡೇಮನಿ ಸಂಗಮೇಶ, ಶೇಖರಗೌಡ ಪಾಟೀಲ್, ಕೆ. ಎಂ.ಶಿವಕುಮಾರಸ್ವಾಮಿ, ಮಹಿಳಾ ಸದಸ್ಯರುಗಳಾಗಿ ಅನುರಾಧ ಕೊಟ್ರೇಶ, ಅಕ್ಷತ ಕೊಟ್ರೇಶ, ಚೆನ್ನಮ್ಮ ಎಂ.ಕೆ, ನಂದಿನಿ, ಎಂ.ಪ್ರಭಾ ಅಜ್ಜಣ್ಣ, ವೀಣಾ ಬಿ.ಎನ್, ಸುಮಾ. ವೈ.ಎಂ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಆಯ್ಕೆಯನ್ನು ಚುನಾವಣಾಧಿಕಾರಿ ಬಿ.ಸಿ. ಗೌರಿಶಂಕರ ಘೋಷಿಸಿದರು.

## ಐ.ಆರ್.ಎಸ್. ಅಧಿಕಾರಿ ಲಿಂಗ, ಹೆಸರು ಬದಲಾವಣೆಗೆ ಸಮ್ಮತಿ

ನವದೆಹಲಿ, ಜು. 10 - ಭಾರತೀಯ ಕಂದಾಯ ಸೇವೆಯ ಹಿರಿಯ ಅಧಿಕಾರಿಯೊಬ್ಬರು ಎಲ್ಲಾ ಅಧಿಕೃತ ದಾಖಲೆಗಳಲ್ಲಿ ತಮ್ಮ ಹೆಸರು ಹಾಗೂ ಲಿಂಗ ಬದಲಿಸಿಕೊಳ್ಳಲು ಕೇಂದ್ರ ಹಣಕಾಸು ಸಚಿವಾಲಯ ಅನುಮೋದನೆ ನೀಡಿದೆ.

2013ರ ಐ.ಆರ್.ಎಸ್. ತಂಡದ ಅಧಿಕಾರಿಯಾಗಿರುವ ಅನುಸೂಯ ಅವರು ಹೈದರಾಬಾದ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಹೆಸರನ್ನು ಅನುಕತಿರ್ ಸೂರ್ಯ ಎಂದು ಬದಲಿಸಿಕೊಳ್ಳಲು ಮತ್ತು ಲಿಂಗವನ್ನು ಹೆಣ್ಣಿನಿಂದ ಗಂಡಿಗೆ ಬದಲಿಸಿಕೊಳ್ಳಲು ಅನುಮತಿ ಕೋರಿದ್ದರು. ಇದಕ್ಕೆ ಹಣಕಾಸು ಸಚಿವಾಲಯ ಅನುಮತಿ ನೀಡಿದೆ.

## ಸಿಲಿಂಡರ್ ಸ್ಫೋಟ: ದಂಪತಿ ಸಾವು

ದಾವಣಗೆರೆ, ಜು.10- ನಗರದ ಎಸ್‌ಓಜಿ ಕಾಲೋನಿಯ ಮನೆಯೊಂದರಲ್ಲಿ ಸಂಭವಿಸಿದ ಸಿಲಿಂಡರ್ ಸ್ಫೋಟದ ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ.

ಹೈಟೆಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮಲ್ಲೇಶಪ್ಪ (64), ಲಲಿತಮ್ಮ (58) ದಂಪತಿ ಸಾವು ಕಂಡಿದ್ದಾರೆ. ಮೊನ್ನೆಯಷ್ಟೇ ಸ್ಫೋಟದಲ್ಲಿ ಗಾಯಗೊಂಡಿದ್ದ ಪಾರ್ವತಮ್ಮ ಸಾವನ್ನಪ್ಪಿದ್ದರು. ಲಲಿತಮ್ಮ ಅವರು ಸೋಮವಾರ ರಾತ್ರಿ ಮೃತಪಟ್ಟರೆ, ಅವರ ಪತಿ ಮಲ್ಲೇಶಪ್ಪ ಅವರು ಮಂಗಳವಾರ ಮಧ್ಯಾಹ್ನ ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದ್ದಾರೆ.



## ಹಿರೇಗೋಣಿಗೆರೆ ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಗೌರಮ್ಮ ಆಯ್ಕೆ

ಹೊನ್ನಾಳಿ, ಜು. 11 - ತಾಲ್ಲೂಕಿನ ಹಿರೇಗೋಣಿಗೆರೆ ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಗೌರಮ್ಮ ಕೇಶೋಜಿರಾವ್, ಉಪಾಧ್ಯಕ್ಷರಾಗಿ ಹೆಚ್. ಮಂಜಪ್ಪ ಹೊಳೆಯಪ್ಪ ಅವಿರೋಧವಾಗಿ ಆಯ್ಕೆಯಾಗಿರುವುದಾಗಿ ಸಹಕಾರಿ ಅಭಿವೃದ್ಧಿ ಅಧಿಕಾರಿ ನವೀನ್ ಕುಮಾರ್ ತಿಳಿಸಿದರು.

ಅಧ್ಯಕ್ಷರಾಗಿದ್ದ ಸೊಮಪ್ಪ ಬುದ್ಯಪ್ಪರ್, ಉಪಾಧ್ಯಕ್ಷ ರಘು ರಾಜೀನಾಮೆ ಯಿಂದ ತೆರವಾದ ಸ್ಥಾನಕ್ಕೆ ಇಂದು ಚುನಾವಣೆ ನಡೆಯಿತು.ಸಂಘದ ಸದಸ್ಯರಾದ ಹಿರೇಗೋಣಿಗೆರೆ ನಜೀರ್‌ಸಾಬ್, ಶಂಕರಪ್ಪ, ಜಿ. ಬಸವರಾಜಪ್ಪ, ಸೊಮಪ್ಪ ಬುದ್ಯಪರ್, ಹೆಚ್.ಎ. ಮಂಜಪ್ಪ, ಪ್ರಕಾಶರಾವ್, ರಘು, ಹೇಮಾವತಿ, ಹರಗನಹಳ್ಳಿ ಚಂದ್ರಪ್ಪ, ಕೆ.ಬಸವರಾಜ್, ಡಿಸಿಸಿ ಬ್ಯಾಂಕ್ ಕ್ಷೇತ್ರಾಧಿಕಾರಿ ವಿಜಯ ಕುಮಾರ, ಸಂಘದ ಕಾರ್ಯನಿರ್ವಾಹಕ ಪ್ರಭು, ರಾಮಚಂದ್ರಪ್ಪ, ಹಿರೇಗೋಣಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಸೋಮಪ್ಪ ಬಣಕಾರ್, ಮಾಜಿ ಅಧ್ಯಕ್ಷ ಹೆಚ್‌ವಿ ನಾಗರಾಜಪ್ಪ, ಗ್ರಾಮದ ಮುಖಂಡ ಹನುಮಂತಪ್ಪ, ಜಿವ್ಯೆ ಸುಭಾಸ್, ವೀರಭದ್ರಪ್ಪ, ಚಂದ್ರಪ್ಪ ಉಪಸ್ಥಿತರಿದ್ದರು.

# 7ನೇ ವೇತನ ಜಾರಿಗೆ ಆಗ್ರಹಿಸಿ ಸರ್ಕಾರಿ ನೌಕರರ ಸಂಘದ ಮನವಿ

**ಜಗಳೂರು**



ಜಗಳೂರು, ಜು. 10 - 7ನೇ ವೇತನ ಜಾರಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಸಮಿತಿ ವತಿಯಿಂದ ಶಾಸಕ. ಬಿ.ದೇವೇಂದ್ರಪ್ಪ ಹಾಗೂ ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಅವರಿಗೆ ಲಿಖಿತ ಮನವಿ ಸಲ್ಲಿಸಲಾಯಿತು.

ಸಂಘದ ತಾಲ್ಲೂಕು ಶಾಖೆ ಅಧ್ಯಕ್ಷ ಸಿ.ಬಿ. ನಾಗರಾಜ್ ಮಾತನಾಡಿ, ರಾಜ್ಯದ 7ನೇ ವೇತನ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಸರ್ಕಾರ ಆದೇಶ ಹೊರಡಿಸಬೇಕು. ವರದಿ ಅನುಷ್ಠಾನ ಗೊಳಿಸಲು ತೆಗೆದುಕೊಂಡ ಅವಧಿ ಮೀರಿದ್ದು ವಿಳಂಬ ವಾಗಿದೆ. ಹಾಗೂ ಎನ್.ಪಿ.ಎಸ್. ರದ್ದುಪಡಿಸಿ ಹಳೇ ಪಿಂಚಣಿ ಯೋಜನೆಯನ್ನು ಮರುಜಾರಿಗೊಳಿಸಬೇಕು. ಕರ್ನಾಟಕ ರಾಜ್ಯ ಆರೋಗ್ಯ ಸಂಜೀವಿನಿ ಯೋಜನೆ (ಕೆಎಎಸ್‌ಎಸ್) ಅನುಷ್ಠಾನಗೊಳಿಸಬೇಕು ಎಂದು ಮನವಿ ಮಾಡಿದರು.

ಶಾಸಕ ಬಿ. ದೇವೇಂದ್ರಪ್ಪ ಮನವಿ ಸ್ವೀಕರಿಸಿ ಮಾತನಾಡಿ, ನಾನು ಒಬ್ಬ ಪಿಂಚಣಿ ಫಲಾನುಭವಿ ಯಾಗಿದ್ದು, ರಾಜ್ಯದಲ್ಲಿ ನಮ್ಮದೇ ಪಕ್ಷ ಆಡಳಿತ ದಲ್ಲಿದ್ದು ಅಂತೆಯೇ ನನ್ನ ಆಡಳಿತಾವಧಿಯಲ್ಲಿ 7ನೇ ವೇತನ ಜಾರಿಗೊಂಡರೆ ನಿಜಕ್ಕೂ ನನಗೂ ಲಾಭ ಮತ್ತು ಸಂತಸ ತರುತ್ತದೆ. ಅಧಿವೇಶನದಲ್ಲಿ ನಾನು ನಿಮ್ಮ ಬೇಡಿಕೆಯ ಧ್ವನಿಯಾಗುವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಮಾತನಾಡಿ, 7ನೇ ವೇತನ ಹಾಗೂ ಓಪಿಎಸ್, ಆರೋಗ್ಯ ಸಂಜೀವಿನಿ ಸೌಲಭ್ಯ ಅವಶ್ಯಕತೆಯಿದೆ. ಸರ್ಕಾರಕ್ಕೆ ಕೂಡಲೇ ತಮ್ಮ ಮನವಿಯನ್ನು ರವಾನಿಸಲಾಗುವುದು' ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಎನ್. ಚಂದ್ರಪ್ಪ, ರಾಜ್ಯ ಪರಿಷತ್ತು ಸದಸ್ಯ ಬಣಕಾರ್, ಡಿ.ಎಸ್. ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಎ.ಎಲ್. ತಿಪ್ಪೇಸ್ವಾಮಿ, ಖಜಾಂಚಿ ಮಾರಪ್ಪ, ನಿರ್ದೇಶಕ ವೀರೇಶ್, ತಿರುಮಲೇಶ್, ಬಸವರಾಜ್, ಬಿ.ಮಹೇಶ್ವರಪ್ಪ, ಸತೀಶ್, ಹನುಮಂತೇಶ್, ಕೃಷ್ಣಪ್ಪ ಮುಂತಾದವರು ಇದ್ದರು.

# ಹಂದಿ ಕಿಡ್ನಿ ಕಸಿ, ಹೃದಯದ ಅವಳಿ ಶಸ್ತ್ರಚಿಕಿತ್ಸೆ

## 47 ದಿನಗಳ ನಂತರ ಮಹಿಳೆ ಸಾವು

ವಾಷಿಂಗ್ಟನ್, ಜು. 10 - ಹಂದಿಯ ಕಿಡ್ನಿ ಕಸಿ ಮಾಡಿಸಿಕೊಳ್ಳುವ ಹಾಗೂ ಹೃದಯ ಬಡಿತಕ್ಕೆ ನೆರವಾಗುವ ಉಪಕರಣ ಅಳವಡಿಸಿಕೊಂಡ ಅಮೆರಿಕದ ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ. ಶಸ್ತ್ರ ಚಿಕಿತ್ಸೆ ನಡೆದ 47 ದಿನಗಳ ನಂತರ ಅವರು ಸಾವನ್ನಪ್ಪಿದ್ದಾರೆ.

ಲಿಸಾ ಪಿಸಾನೋ ಅವರು ಕಿಡ್ನಿ ಹಾಗೂ ಹೃದಯ ವೈಫಲ್ಯದ ಸಮಸ್ಯೆಯಿಂದ ಸಾವಿಗೆ ಹತ್ತಿರವಾಗಿದ್ದರು. ಕಳೆದ ಏಪ್ರಿಲ್ ತಿಂಗಳಲ್ಲಿ ಎನ್.ವೈ.ಯು. ಲಂಗೊನೆ ಆಸ್ಪತ್ರೆಯಲ್ಲಿ ಅವಳಿ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು. ನ್ಯೂಜೆರ್ಸಿಯ ಈ ಮಹಿಳೆ ಆರಂಭದಲ್ಲಿ ಚೇತರಿಸಿಕೊಂಡಿದ್ದರು.

ಆದರೆ, 47 ದಿನಗಳ ನಂತರ ಹೃದಯಕ್ಕೆ ನೀಡುವ ಔಷಧಿಯಿಂದ ಕಸಿ ಮಾಡಿದ ಹಂದಿ ಕಿಡ್ನಿಗೆ ಹಾನಿಯಾಗಿತ್ತು. ಕಿಡ್ನಿ ಹೊರ ತೆಗೆದು ಮಹಿಳೆಯನ್ನು ಮತ್ತೆ ಡಯಾಲಿಸಿಸ್‌ನಲ್ಲಿ ಇರಿಸಬೇಕಾಯಿತು.

ಹಂದಿ ಅಂಗವನ್ನು ಮನುಷ್ಯರಿಗೆ ಅಳವಡಿಸುವುದು ಇತ್ತೀಚೆಗೆ ನಡೆಯುತ್ತಿರುವ ಪ್ರಯೋಗವಾಗಿದೆ. ಇದಕ್ಕೆ ಕ್ಸೆನೊಟ್ರಾನ್ಸ್‌ಪ್ಲಾಂಟೇಷನ್ ಎಂದು ಕರೆಯಲಾಗುತ್ತದೆ. ಇಂತಹ ಶಸ್ತ್ರಚಿಕಿತ್ಸೆಗೆ ಒಪ್ಪಿಕೊಂಡಿದ್ದ ಪಿಸಾನೋ ಅವರನ್ನು ಪ್ರಶಂಸಿಸುವುದಾಗಿ ಎನ್.ವೈ.ಯು. ಲಂಗೊನೆ ಶಸ್ತ್ರಚಿಕಿತ್ಸಕ ಡಾ. ರಾಬರ್ಟ್ ಮಾಂಟಗೊಮೆರಿ ಹೇಳಿದ್ದಾರೆ.

ಕ್ಸೆನೊಟ್ರಾನ್ಸ್‌ಪ್ಲಾಂಟೇಷನ್ ಮೂಲಕ ಕಸಿ ಮಾಡಲು ಅಂಗಗಳ ಕೊರತೆಯಾಗುವ ಸಮಸ್ಯೆ ಬಗೆಹರಿಯುವ ಆಶಾಭಾವನೆ ಇದೆ. ಮುಂದೊಂದು ದಿನ ಒಬ್ಬ ವ್ಯಕ್ತಿ ಬದುಕಬೇಕಾದರೆ, ಅಂಗ ದಾನ ಮಾಡುವ ಇನ್ನೊಬ್ಬ ವ್ಯಕ್ತಿ ಸತ್ತಿರಬೇಕು ಎಂಬ ಪರಿಸ್ಥಿತಿ ಬದಲಾಗಲಿದೆ ಎಂದು ಮಾಂಟಗೊಮೆರಿ ಆಶಿಸಿದ್ದಾರೆ.

ಹಂದಿ ಕಿಡ್ನಿ ಕೆಲಸ ಮಾಡುತ್ತದೆ ಎಂಬ ಬಗ್ಗೆ ಖಾತರಿ ಇಲ್ಲ. ಆದರೆ, ಒಂದು ಅವಕಾಶ ಬಯಸಿದ್ದೆ. ಅತಿ ಹೆಚ್ಚೆಂದರೆ ಈ ಶಸ್ತ್ರಚಿಕಿತ್ಸೆ ನನಗೆ ಕೆಲಸ ಮಾಡದೇ ಇರಬಹುದು. ಆದರೆ, ಈ ಪ್ರಯತ್ನ ಇನ್ನೊಬ್ಬರಿಗೆ ಉಪಯುಕ್ತವಾಗಬಹುದು ಎಂದು 54 ವರ್ಷದ ಪಿಸಾನೋ ಅವರು ಹೇಳಿದ್ದರು.

ಜೀನ್ ತಿದ್ದುಪಡಿ ಮಾಡಿದ ಹಂದಿಯ ಕಿಡ್ನಿ ಪಡೆದ ಎರಡನೇ ಮಹಿಳೆ ಪಿಸಾನೋ. ಈ ಹಿಂದೆ ಮೆಸಾಚ್ಯೂಸೆಟ್ಸ್ ಜನರಲ್ ಹಾಸ್ಪಿಟಲ್‌ನಲ್ಲಿ ರಿಚರ್ಡ್ ಸ್ಲೇಮ್ಯಾನ್ ಅವರು ಇದೇ ರೀತಿಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಎರಡು ತಿಂಗಳ ನಂತರ ಸಾವನ್ನಪ್ಪಿದ್ದರು. ಆದರೆ, ಅವರು ಮೊದಲೇ ಇದ್ದ ಹೃದಯದ ರೋಗದಿಂದ ಸಾವನ್ನಪ್ಪಿದ್ದರೇ ಹೊರತು, ಹಂದಿ ಕಿಡ್ನಿ ಕಸಿ ಮಾಡಿದ ಕಾರಣಕ್ಕಲ್ಲ ಎಂದು ವೈದ್ಯರು ಹೇಳಿದ್ದರು.

ಮೇರಿಲ್ಯಾಂಡ್ ವಿಶ್ವವಿದ್ಯಾಲಯವು ಹಂದಿ ಹೃದಯಗಳನ್ನು ಇಬ್ಬರು ವ್ಯಕ್ತಿಗಳಿಗೆ ಅಳವಡಿಸಿತ್ತು. ಉಭಯರು ತಿಂಗಳುಗಳಲ್ಲೇ ಸಾವನ್ನಪ್ಪಿದ್ದರು.

## ಕಾಶೀಪುರದ ಗೌಡ್ರ ವಿಶ್ವನಾಥಪ್ಪ ನಿಧನ



ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿ

**ಶ್ರೀ ಗೌಡ್ರ ವಿಶ್ವನಾಥಪ್ಪ** (78) ಇವರು

ದಿನಾಂಕ 10.07.2024ರ ಬುಧವಾರ ಮಧ್ಯಾಹ್ನ 3.15ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.07.2024ರ ಗುರುವಾರ ಬೆಳಿಗ್ಗೆ 12 ಗಂಟೆಗೆ ಸ್ವಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಲಿದೆ.

**- ದುಃಖತಪ್ತ ಕುಟುಂಬ ವರ್ಗ, ಮೊ: 94801 62934, 91644 52450**

## ಎರಡನೇ ವರ್ಷದ ಪುಣ್ಯಸ್ಮರಣೆ



**ಲಿಂ|| ಮೋಹನ್ ಎಸ್.ಎಂ.**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ತೋರಿದ ಮಾರ್ಗದಲ್ಲಿ ಮುನ್ನಡೆಯುತ್ತಿರುವ...


ಶ್ರೀಮತಿ ಎಸ್.ಎಂ. ಶಿವಲೀಲಾ ಷಡಾಕ್ಷರಯ್ಯ

ಡಾ|| ವಿನುತಾ ಎಸ್.ಎಂ. ಡಾ|| ಕೃಪಾನಿಧಿ

ಶ್ರೀಮತಿ ಮಂಜುಳಾ ಶರಣ ಬಸವರಾಜು, ಪುಷ್ಪಾ ಮೋಹನ್


ಶ್ರೀಮತಿ ಸರೋಜ ಆನಂದ, ದರ್ಶನ್, ಸುಜಲ್, ಶರತ್, ಅನಘ, ಮನು, ಪ್ರೇಕ್ಷಾ, ಸೌರಭ, ಕ್ಷಮಾ ಮತ್ತು ಬಂಧುಗಳು.

## ಲಿಂಗದಹಳ್ಳಿ ಹನುಮಂತರಾಜು ನಿಧನ



ದಾವಣಗೆರೆಯ ಶಿವಾಲಿ ಟಾಕೀಸ್ ಮೇನ್ ರೋಡ್ ಎಲ್ಲಮ್ಮ ದೇವಸ್ಥಾನದ ಎದುರು ಜಾಲಿನಗರ ವಾಸಿ, ಪತ್ರಿಕಾ ವಿತರಕ ರಾಜು ಅವರ ತಂದೆ ಲಿಂಗದಹಳ್ಳಿ ಹನುಮಂತರಾಜು (74) ಅವರು ದಿನಾಂಕ : 10.7.2024ರ ಬುಧವಾರ ಸಂಜೆ 6.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಹರಿಹರ ರಸ್ತೆ ವೈಕುಂಠ ಧಾಮದಲ್ಲಿ ದಿನಾಂಕ 11.7.2024ರ ಗುರುವಾರ ಮಧ್ಯಾಹ್ನ 12ಕ್ಕೆ ನೆರವೇರಲಿದೆ.

## ಹೊಸ ಕುಂದುವಾಡದ ಮಾರಮ್ಮ ನಿಧನ



ದಾವಣಗೆರೆ ಜಿಲ್ಲೆಯ ಹೊಸ ಕುಂದುವಾಡದ ನಾಗರಕೊಂಡ ನಾಗಪ್ಪ ನವರ ಧರ್ಮಪತ್ನಿ ಮಾರಮ್ಮ (77) ಇವರು ದಿನಾಂಕ 10.7.2024ರ ಬುಧವಾರ ಮಧ್ಯಾಹ್ನ ನಿಧನರಾದರು. ಇಬ್ಬರು ಪುತ್ರರು ಹಾಗೂ ಅಪಾರ ಬಂಧು ಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಯನ್ನು ದಿನಾಂಕ 11.07.2024ರ ಗುರುವಾರ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು.

## ನಗರಕ್ಕೆ ನಾಳೆ ಸಂಕಲ್ಪ ಯಾತ್ರೆ

ದಾವಣಗೆರೆ, ಜು. 10 - ವಿಹಂಗಮ ಯೋಗ ಸಂತ ಸಮಾಜದ ಸ್ಥಾಪನೆ. ಶತಾಬ್ದ ಸಮಾರೋಪ ಮಹೋತ್ಸವ 25,000 ಕುಂಡಗಳನ್ನು ಇರಿಸಿ ಸ್ವರ್ವೇದ ಜ್ಞಾನ ಮಹಾಯಜ್ಞ ನಿಮಿತ್ತ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಆಯೋಜಿಸಲಾಗಿರುವ ರಾಷ್ಟ್ರವ್ಯಾಪಿ ಸಂಕಲ್ಪ ಯಾತ್ರೆಯು ಅನೇಕ ರಾಜ್ಯಗಳಿಂದ ಪ್ರವಾಸಗೊಂಡು ನಾಡಿದ್ದು ದಿನಾಂಕ 12 ರ ಶುಕ್ರವಾರ ನಗರವನ್ನು ತಲುಪಲಿದೆ.

ದಿವ್ಯ ಸ್ವರ್ವೇದ ಕಥೆಯ ಪ್ರವರ್ತಕ ಸಂತಶ್ರೀ ವಿಜ್ಞಾನ ದೇವಜೀ ಮಹಾರಾಜ ಪಾವನ ಉಪಸ್ಥಿತಿಯಲ್ಲಿ ಸ್ವರ್ವೇದ ಕಥಾಮೃತ ಸಮಾರೋಪ ಹಾಗೂ ಸಾಧನ ಸಮಾವೇಶವು ದಾವಣಗೆರೆ - ಹರಿಹರ ಅರ್ಬನ್ ಸಮುದಾಯ ಭವನದಲ್ಲಿ ಅಂದು ಸಂಜೆ 5 ಗಂಟೆಗೆ ನೆರವೇರಲಿದೆ.

## ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು.5- ಐಟಿಐ ಪ್ರವೇಶಕ್ಕಾಗಿ ಆಫ್‌ಲೈನ್ ಮುಖಾಂತರ ಪ್ರವೇಶ ಮಾಡಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಗಸ್ಟ್ 31 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಮಾಹಿತಿಗಾಗಿ ಆಯಾ ಸಂಸ್ಥೆಯ ಪ್ರಾಚಾರ್ಯರರನ್ನು ಸಂಪರ್ಕಿಸಬಹುದಾಗಿದೆ.

# ತಾಪಮಾನದಿಂದ ಚಂಡಮಾರುತದ ತೀವ್ರತೆ ಏರಿಕೆ, ಸಂಖ್ಯೆಯಲ್ಲ



## ಹವಾಮಾನ ಬದಲಾವಣೆ ಅಧ್ಯಯನ ಮಾಡುತ್ತಿರುವ ವಿಜ್ಞಾನಿಗಳ ನಿಲುವು

ಲಂಡನ್, ಜು. 10 - ಜಾಗತಿಕ ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಚಂಡಮಾರುತಗಳ ಸಂಖ್ಯೆ ಹೆಚ್ಚಾಗದಿದ್ದರೂ ಅವುಗಳ ತೀವ್ರತೆ ಹೆಚ್ಚಾಗಲಿದೆ. ಇದರಿಂದ ದ್ವೀಪ ದೇಶಗಳು ಹಾಗೂ ಬಡ ದೇಶಗಳ ಮೇಲೆ ಗಂಭೀರ ಪರಿಣಾಮವಾಗಲಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಇತ್ತೀಚೆಗೆ ಗ್ರೆನ್‌ಡೈನ್ ದ್ವೀಪಗಳಿಗೆ ಅಪ್ಪಳಿಸಿದ ಬೆರಿಲ್ ಚಂಡಮಾರುತದ ಅಧ್ಯಯನ ಮಾಡಿದ ವಿಜ್ಞಾನಿಗಳು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗಂಟೆಗೆ 150 ಮೈಲಿ ವೇಗದ ಗಾಳಿಯೊಂದಿಗೆ ಈ ಚಂಡಮಾರುತ ಆರ್ಭಟಿಸಿತ್ತು.

ಅಟ್ಲಾಂಟಿಕ್ ವಲಯದಲ್ಲಿ ಚಂಡಮಾರುತಗಳು ಅಪರೂಪವೇನಲ್ಲ. ಚಂಡಮಾರುತ ಆರಂಭವಾಗುವ ಮೊದಲೇ ಮುನ್ಸೂಚನೆಗಳು ಸಿಗುತ್ತವೆ. ಆದರೆ ಬೆರಿಲ್ ಚಂಡಮಾರುತ ಕೇವಲ 24 ಗಂಟೆಗಳಲ್ಲಿ ತನ್ನ ಸರಾಸರಿ ವೇಗವನ್ನು 70 ಮೈಲಿಗಳಿಂದ 130 ಮೈಲಿಗಳಿಗೆ ಹೆಚ್ಚಿಸಿಕೊಂಡಿದ್ದು ವಿಜ್ಞಾನಿಗಳಲ್ಲಿ ಅಚ್ಚರಿ ತಂದಿದೆ.

ಈ ರೀತಿಯ ಚಂಡಮಾರುತಗಳು ಅಟ್ಲಾಂಟಿಕ್ ವಲಯದಲ್ಲಿ ಆರಂಭದ ದಿನಗಳಲ್ಲಿ ಕಂಡುಬರುವುದು ಅಪರೂಪ. ಸಮುದ್ರದ ಗಾಳಿ ಸಾಮಾನ್ಯಕ್ಕಿಂತ ಹೆಚ್ಚು ಬಿಸಿಯಾಗಿರುವ ಕಾರಣ ಬೆರಿಲ್ ಚಂಡಮಾರುತ ವೇಗವಾಗಿ ತೀವ್ರತೆ ಪಡೆದುಕೊಂಡಿದೆ ಎಂದು ನ್ಯೂಯಾರ್ಕ್ ಸ್ಟೇಟ್ ಯೂನಿವರ್ಸಿಟಿಯ ಪರಿಸರ ವಿಜ್ಞಾನಿ ಬ್ರಿಯಾನ್ ಟ್ಯಾಂಕ್ ಹೇಳಿದ್ದಾರೆ.

ಜಾಗತಿಕ ತಾಪಮಾನ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ರೀತಿಯ ಚಂಡಮಾರುತಗಳು ತೀರಾ ಅಚ್ಚರಿ ತರುವಂತದ್ದೇನು ಅಲ್ಲ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ಅದರಲ್ಲೂ ಮಧ್ಯ ಅಟ್ಲಾಂಟಿಕ್ ಪ್ರದೇಶದಲ್ಲಿ ಈ ರೀತಿಯ ಚಂಡಮಾರುತಗಳು ಕಂಡುಬರುವುದು ಅಪರೂಪವೇನೂ ಅಲ್ಲ.

ಆದರೆ ಸಾಮಾನ್ಯವಾಗಿ ಬೇಸಿಗೆಯ ಮಧ್ಯ ಭಾಗದಲ್ಲಿ ಸಮುದ್ರದ ನೀರು ಹೆಚ್ಚು ಬಿಸಿಯಾಗಿರುತ್ತದೆ. ಅಟ್ಲಾಂಟಿಕ್ ವಲಯದಲ್ಲಿ ಬೇಸಿಗೆಯ ಆರಂಭದಲ್ಲೇ ಸಮುದ್ರದ ನೀರು ಇಷ್ಟೊಂದು ಬಿಸಿಯಾಗಿರುವುದು ಗಮನಾರ್ಹ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಆರಂಭದಲ್ಲೇ ಚಂಡಮಾರುತ ಈ ಪರಿ ಇದ್ದರೆ ಮುಂಬರುವ ದಿನಗಳಲ್ಲಿ ಏನಾಗಬಹುದು ಎಂಬ ಪ್ರಶ್ನೆಯೂ ಉದ್ಭವಿಸಿದೆ.

ಸಮುದ್ರದ ನೀರು 26 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾದಲ್ಲಿ ಅದು ಚಂಡಮಾರುತಕ್ಕೆ ಸಹಾಯಕವಾಗುತ್ತದೆ. ಬಿಸಿ ವಾತಾವರಣ ಹಾಗೂ ಗಾಳಿಯಲ್ಲಿ ತೇವಾಂಶ ಇರುವುದು ಚಂಡಮಾರುತಕ್ಕೆ ಅಗತ್ಯ. ಇದರ ಜೊತೆಗೆ ಗಾಳಿಯ ಚಲನವೂ ಚಂಡಮಾರುತಕ್ಕೆ ನೆರವಾಗುತ್ತದೆ.

ಜಾಗತಿಕ ತಾಪಮಾನ ಹೆಚ್ಚಾದಂತೆ ಚಂಡಮಾರುತಗಳ ಸಂಖ್ಯೆಯೂ ಹೆಚ್ಚಾಗಬಹುದು ಎಂದು ನೀವು ಯೋಚಿಸಬಹುದು. ಆದರೆ ಇದುವರೆಗೂ ನಡೆಸಲಾದ ಅಧ್ಯಯನಗಳಲ್ಲಿ ಚಂಡಮಾರುತಗಳ ಸಂಖ್ಯೆ ಹೆಚ್ಚಾಗುವುದು ಕಂಡುಬಂದಿಲ್ಲ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ವಿಜ್ಞಾನಿ ಬೆನ್ ಕ್ಲಾರ್ಕೆ ಹಾಗೂ ಇಂಪೀರಿಯಲ್ ಕಾಲೇಜ್ ಲಂಡನ್‌ನ ಫ್ರೀಡೆರೈಕ್ ಓಟೋ ತಿಳಿಸಿದ್ದಾರೆ.

ತಾಪಮಾನ ಹೆಚ್ಚಾಗುತ್ತಿರುವ ಈ ಕಾಲದಲ್ಲಿ, ಬಿಸಿ, ತೇವಾಂಶ ಇರುವ ಗಾಳಿ ಹಾಗೂ ಸಮುದ್ರದಲ್ಲಿ ಹೆಚ್ಚಿನ ತಾಪಮಾನ ಸಾಮಾನ್ಯವಾಗಿ ಕಂಡು ಬರುತ್ತಿದೆ. ಆದರೂ ಚಂಡಮಾರುತಗಳ ಸಂಖ್ಯೆ ಹೆಚ್ಚಾಗುತ್ತಿರುವುದಕ್ಕೆ ಯಾವುದೇ ಸಾಕ್ಷಿಗಳು ದೊರೆತಿಲ್ಲ. ಮುಂದಿನ ದಿನಗಳಲ್ಲಿ ತಾಪಮಾನ ಹೆಚ್ಚಾದರೂ ಚಂಡಮಾರುತಗಳ ಸಂಖ್ಯೆ ಹೆಚ್ಚಾಗಲಿದೆ ಎಂಬ ನಿರೀಕ್ಷೆ ಇಲ್ಲ ಎಂದು ಈ ವಿಜ್ಞಾನಿಗಳು ಹೇಳುತ್ತಾರೆ. ಆದರೆ, ಚಂಡಮಾರುತಗಳು ಬೆರಿಲ್ ರೀತಿಯಲ್ಲಿ ಅತಿ ಹೆಚ್ಚಿನ ತೀವ್ರತೆ ಹೊಂದಿರುತ್ತವೆ. ತೀವ್ರ ಚಂಡಮಾರುತಕ್ಕೆ ಅಗತ್ಯವಾದ ಅಂಶಗಳು ಉತ್ತರ ಹಾಗೂ ದಕ್ಷಿಣ ಗೋಳಗಳಲ್ಲಿ ಕಂಡು ಬರುತ್ತಿವೆ. ಸಮುದ್ರದ ತಾಪಮಾನ ಹೆಚ್ಚಾಗುತ್ತಾ ಹೋದರೆ ಸಾಮಾನ್ಯ ದಿನಗಳಿಗೆ ಹೊರತಾಗಿಯೂ ಚಂಡಮಾರುತ ಸೃಷ್ಟಿಯಾಗಬಹುದು ಎಂದವರು ಹೇಳಿದ್ದಾರೆ.

ಕೆಲವೊಮ್ಮೆ ಚಂಡಮಾರುತಗಳು ಸಮುದ್ರ ತೀರದ ಬಳಿ ಬಂದಾಗ ಸಂಪೂರ್ಣ ಸ್ಥಗಿತಗೊಳ್ಳುತ್ತಿವೆ. ಇದರಿಂದಾಗಿ ಮಳೆಯ ಪ್ರಮಾಣ ಹೆಚ್ಚಾಗುತ್ತದೆ ಹಾಗೂ ಪ್ರವಾಹ ತೀವ್ರಗೊಳ್ಳುತ್ತಿದೆ. ಹೀಗಾಗಿಯೇ ಲೂಸಿಯಾನಗೆ 2017ರಲ್ಲಿ ಅಪ್ಪಳಿಸಿದ ಚಂಡಮಾರುತ ಅತ್ಯಂತ ವಿನಾಶಕಾರಿಯಾಗಿತ್ತು ಎಂದು ಕ್ಲಾರ್ಕೆ ಹಾಗೂ ಓಟೋ ಹೇಳಿದ್ದಾರೆ.

ಇದರ ಜೊತೆಗೆ ಕೆಲವೊಮ್ಮೆ ಚಂಡಮಾರುತಗಳು ಒಂದರ ಹಿಂದೆ ಮತ್ತೊಂದರಂತೆ ಅಪ್ಪಳಿಸುವ ಕಾರಣದಿಂದ ಸಂಕಷ್ಟ ಹೆಚ್ಚಾಗುತ್ತಿದೆ. ಚಂಡಮಾರುತ ಪೀಡಿತ ಪ್ರದೇಶಗಳಲ್ಲಿ ಜನ ವಾಸಿಸುವುದು ಕಠಿಣವಾಗುತ್ತಿದೆ ಎಂದು ಎಡಿನ್‌ಬರ್ಗ್ ನೇಪಿಯರ್ ವಿಶ್ವವಿದ್ಯಾಲಯದ ಸಂಶೋಧಕಿ ಅನಿತಾ ಕಾರ್ತಿಕ್ ಹೇಳಿದ್ದಾರೆ.

ಇದರ ಜೊತೆಗೆ ಚಂಡಮಾರುತಗಳು ಸಣ್ಣ ದೇಶಗಳಿಗೆ ಅಪ್ಪಳಿಸಿದಾಗ ಅವುಗಳ ಆರ್ಥಿಕ ಶಕ್ತಿಯೇ ನಾಶವಾಗುತ್ತದೆ. ಶ್ರೀಮಂತ ಹಾಗೂ ಬಡ ದೇಶಗಳಿಗೆ ಚಂಡಮಾರುತದಿಂದ ಆಗುವ ಪರಿಣಾಮ ಬೇರೆ ಬೇರೆ ರೀತಿ ಆಗಿದೆ. ಬಡ ದೇಶಗಳು ಚಂಡಮಾರುತದಿಂದ ಆಗುವ ಹಾನಿಯನ್ನು ಎದುರಿಸುವಷ್ಟು ಶಕ್ತಿ ಹೊಂದಿರುವುದಿಲ್ಲ.

ದ್ವೀಪ ದೇಶಗಳು ತಾಪಮಾನ ಹೆಚ್ಚುತ್ತಿರುವ ಈ ಕಾಲದಲ್ಲಿ ಹೊಸಘಟ್ಟಕ್ಕೆ ಕಾಲಿಡುತ್ತಿವೆ. ಚಂಡಮಾರುತಗಳ ತೀವ್ರತೆಯು ಪರಿಸರ ಹೊಂದಾಣಿಕೆಯ ಅಗತ್ಯವನ್ನು ಇನ್ನಷ್ಟು ಒತ್ತಿ ಹೇಳುತ್ತಿವೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

# ಮುಡಾ ವಿವಾದವೇ ಅಲ್ಲ, ಸಿಬಿಐ ತನಿಖೆ ಇಲ್ಲ : ಸಿದ್ದರಾಮಯ್ಯ



ಮೈಸೂರು, ಜು. 10 - ನನ್ನ ಪತ್ನಿಗೆ ಬದಲಿ ನಿವೇಶನ ನೀಡಿದ್ದು ವಿವಾದದ ವಿಚಾರವೇ ಅಲ್ಲ. ಎಲ್ಲವೂ ಕಾನೂನು ಬದ್ಧವಾಗಿಯೇ ನಡೆದಿದೆ. ಬಿಜೆಪಿಯವರು ರಾಜಕಾರಣಕ್ಕೋಸ್ಕರ ಈ ವಿಚಾರವನ್ನು ಎಳೆದಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಮುಡಾ ಹಗರಣದ ಕುರಿತು ಪತ್ರಕರ್ತರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಜುಲೈ 15ರಿಂದ ವಿಧಾನಮಂಡಲ ಅಧಿವೇಶನ ಆರಂಭಗೊಳ್ಳಲಿದ್ದು, ಮುಡಾ ಹಗರಣದ ಬಗ್ಗೆ ಪ್ರಸ್ತಾಪವಾದರೆ ಉತ್ತರ ಕೊಡುತ್ತೇನೆ. ಆದರೆ, ನನ್ನ ಪತ್ನಿ ವಿಷಯದಲ್ಲಿ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಮುಡಾದಿಂದ 50:50 ಅನುಪಾತದಡಿ ನಿವೇಶನ ಹಂಚಿಕೆ ಮಾಡದಂತೆ 2019ರಲ್ಲೇ ಆದೇಶಿಸಲಾಗಿದೆ. ಅದಾದ ಮೇಲೂ ಕೆಲವರಿಗೆ ನಿವೇಶನ ನೀಡಿದ್ದಾರೆ. ಆ ಬಗ್ಗೆ ತನಿಖೆ ನಡೆಯುತ್ತಿದೆ. ನನ್ನ ಪತ್ನಿಗೆ ಬದಲಿ ನಿವೇಶನ ಕೊಟ್ಟಿದ್ದನ್ನು ಬಿಜೆಪಿಯವರು ವಿವಾದ ಮಾಡುತ್ತಿದ್ದಾರೆ. ರಾಜಕಾರಣಕ್ಕೋಸ್ಕರ ಪ್ರತಿಭಟಿಸುತ್ತಿದ್ದಾರೆ ಎಂದರು.

ವಿಜಯನಗರದಲ್ಲೇ ನಿವೇಶನ ಕೊಡಿ ಎಂದು ನಾವು ಕೇಳಿಲ್ಲ. ಭೂಮಿಯನ್ನು ಅಕ್ರಮವಾಗಿ ಪಡೆದುಕೊಂಡಿರುವುದು ತಪ್ಪು ಎಂದು ಪ್ರಾಧಿಕಾರವೇ ಒಪ್ಪಿ ನಿವೇಶನ ನೀಡಿದೆ. ಹೀಗಿರುವಾಗ ಇದರಲ್ಲಿ ವಿವಾದವೇನಿದೆ, ಅಕ್ರಮವೇನಿದೆ. ನಿಮ್ಮ ಜಮೀನನ್ನು ಹೀಗೆ ಪಡೆದುಕೊಂಡರೆ ಬಿಟ್ಟು ಬಿಡುತ್ತೀರಾ? ಎಂದು ಪ್ರಶ್ನಿಸಿದ್ದಾರೆ.

ಮುಡಾದಲ್ಲಿ ನಡೆದಿರುವ ಅಕ್ರಮದ ಕುರಿತು ಇಬ್ಬರು ಐಎಎಸ್ ಅಧಿಕಾರಿಗಳ ತಂಡದಿಂದ ತನಿಖೆ ಮಾಡಿಸುತ್ತಿದ್ದೇವೆ. ನಿವೇಶನಗಳು ಹಂಚಿಕೆ ಆಗಿರುವುದನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಕಾನೂನು ಬಾಹಿರ ಎಂದು ವರದಿ ಬಂದರೆ, ಸಂಬಂಧಿಸಿದವರ ವಿರುದ್ಧ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ. ಪ್ರಕರಣವನ್ನು ಸಿಬಿಐಗೆ ಕೊಡುವ ಅಗತ್ಯವಿಲ್ಲ. ನಮ್ಮವರೇ ಸಮರ್ಥರಿದ್ದಾರೆ ಎಂದೂ ಸಿದ್ದರಾಮಯ್ಯ ಹೇಳಿದ್ದಾರೆ.

## ಮಲೇಬೆನ್ನೂರಿನಲ್ಲಿ ಇಂದು ಸಭೆ

ಪಟ್ಟಣದಲ್ಲಿ 3ನೇ ವರ್ಷದ ಹಿಂದೂ ಮಹಾಗಣಪತಿ ಪ್ರತಿಷ್ಠಾಪಿಸುವ ಕುರಿತು ಪೂರ್ವಭಾವಿ ಸಭೆಯನ್ನು ಇಂದು ಸಂಜೆ 6 ಗಂಟೆಗೆ ಹರಳಹಳ್ಳಿ ರಸ್ತೆಯಲ್ಲಿರುವ ಶ್ರೀ ಏಕನಾಥೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಕರೆಯಲಾಗಿದೆ ಎಂದು ಗೌಡ್ರ ಶ್ರೀನಿವಾಸ್ ತಿಳಿಸಿದ್ದಾರೆ.

# ಮಹಿಳಾ ಸಬಲೀಕರಣಕ್ಕೆ ಹಣಕಾಸು, ವಸತಿ ಸುರಕ್ಷತೆ ಅಗತ್ಯ : ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನಾಗರತ್ನ

ನವದೆಹಲಿ, ಜು. 10 - ಮಹಿಳೆಯರ ನಿಜವಾದ ಸಬಲೀಕರಣ ಆಗಬೇಕಾಗಿದ್ದರೆ ಹಣಕಾಸು ಹಾಗೂ ವಸತಿ ಸುರಕ್ಷತೆಯ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅಭಿಪ್ರಾಯಪಟ್ಟಿದ್ದಾರೆ.

ಮುಸ್ಲಿಂ ಮಹಿಳೆ ಸಿ.ಆರ್.ಪಿ.ಸಿ. ಸೆಕ್ಷನ್ 125ರ ಅನ್ವಯ ಜೀವನಾಂಶ ಪಡೆಯಬಹುದೇ ಎಂಬುದಕ್ಕೆ ಸಂಬಂಧಿಸಿದಂತೆ ನೀಡಿದ ತೀರ್ಪಿನಲ್ಲಿ ನಾಗರತ್ನ ಅವರು ಈ ನಿಲುವು ತಳೆದಿದ್ದಾರೆ. 125ನೇ ಸೆಕ್ಷನ್ ಅನ್ವಯ ಮುಸ್ಲಿಂ ಮಹಿಳೆ ಜೀವನಾಂಶ ಪಡೆಯಬಹುದು ಎಂದು ನ್ಯಾಯಮೂರ್ತಿ ನಾಗರತ್ನ ಹಾಗೂ ನ್ಯಾಯಮೂರ್ತಿ ಆಗಸ್ಟ್ ಟೈನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ತೀರ್ಪು ನೀಡಿದೆ.

ಭಾರತೀಯ ಮಹಿಳೆಯರ ಹಣಕಾಸು ಹಾಗೂ ವಸತಿ ಸುರಕ್ಷತೆ ಎರಡನ್ನು ರಕ್ಷಿಸಬೇಕು ಮತ್ತು ವಿಸ್ತರಿಸಬೇಕಿದೆ. ಇದರಿಂದ ಗೃಹಿಣಿಯರ ನಿಜವಾದ ಸಬಲೀಕರಣವಾಗುತ್ತದೆ. ಗೃಹಿಣಿಯರು ಭಾರತೀಯ ಕುಟುಂಬದ ಬೆನ್ನೆಲುಬು. ಕುಟುಂಬಗಳು ಭಾರತದ ಸಮಾಜದ ಮೂಲಭೂತ ಘಟಕಗಳಾಗಿದ್ದು, ಈ ಘಟಕಗಳನ್ನು ಬಲಪಡಿಸಬೇಕಿದೆ ಎಂದು ನ್ಯಾಯಮೂರ್ತಿ ನಾಗರತ್ನ 45 ಪುಟಗಳ ತೀರ್ಪಿನಲ್ಲಿ ತಿಳಿಸಿದ್ದಾರೆ.

ಭಾವನಾತ್ಮಕವಾಗಿ ಬೆಸೆದುಕೊಂಡಿರುವ ಹಾಗೂ ಸುರಕ್ಷತೆ ಹೊಂದಿರುವ ಸ್ಥಿರ ಕುಟುಂಬಗಳು ಸಮಾಜಕ್ಕೆ ಸ್ಥಿರತೆ ಒದಗಿಸಲು ಸಾಧ್ಯ. ಜೀವನದ ಮೌಲ್ಯಗಳನ್ನು ಕುಟುಂಬದಲ್ಲಷ್ಟೇ ಕಲಿಯಲು ಸಾಧ್ಯ ಎಂದವರು ತಿಳಿಸಿದ್ದಾರೆ. ಆದರೆ, ಹಲವಾರು ಕುಟುಂಬಗಳಲ್ಲಿ ಗೃಹಿಣಿಯರು ಸ್ವತಂತ್ರ ಆದಾಯ ಮೂಲಗಳನ್ನು ಹೊಂದಿಲ್ಲ. ವಿಶೇಷವಾಗಿ ವೈಯಕ್ತಿಕ ವೆಚ್ಚಗಳಿಗಾಗಿ ಸ್ವತಂತ್ರ ಹಣಕಾಸು ಹೊಂದಿಲ್ಲ ಎಂದವರು ಹೇಳಿದರು.

ಭಾರತೀಯ ಸಮಾಜದಲ್ಲಿ ಮಗಳು ಮದುವೆಯಾದ ನಂತರ ಗಂಡನ ಮನೆಯಲ್ಲಿರಬೇಕು ಇಲ್ಲವೇ ಗಂಡನ ಕುಟುಂಬದ ಜೊತೆ ಇರಬೇಕು ಎಂದು ಬಯಸುತ್ತಾರೆ. ಅನಿವಾರ್ಯ ಕಾರಣಗಳಿರದ ಹೊರತು ಮಹಿಳೆ ಬೇರೆ ಇರಲು ಸಾಧ್ಯವಾಗದು ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದ್ದಾರೆ.

ಮಹಿಳೆ ಒಂದೊಮ್ಮೆ ಸ್ವಂತ ಆದಾಯ ಹೊಂದಿದ್ದರೆ ಗಂಡನ ಮೇಲೆ ಸಂಪೂರ್ಣ ಅವಲಂಬನೆ ಆಗಿರುವುದಿಲ್ಲ. ಆದರೆ ಮನೆ ರೂಪಿಸುವ ಗೃಹಿಣಿಯರು ಕೆಲವೊಮ್ಮೆ ಸ್ವಂತ ಆದಾಯ ಹೊಂದಿರುವುದಿಲ್ಲ. ಹೀಗಾಗಿ ಅವರು ಹಣಕಾಸಿಗಾಗಿ ಗಂಡ ಹಾಗೂ ಅವರ ಕುಟುಂಬವನ್ನು ಅವಲಂಬಿಸಿರುತ್ತಾರೆ ಎಂದು ನ್ಯಾಯಮೂರ್ತಿ ಹೇಳಿದ್ದಾರೆ. ಆದರೆ, ಬಹಳಷ್ಟು ವಿವಾಹಿತ ಪುರುಷರು ಗೃಹಿಣಿಯರ ಈ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಅವರ ವೆಚ್ಚದ ಮನವಿಯನ್ನು ಒರಟಾಗಿ ತಿರಸ್ಕರಿಸುತ್ತಾರೆ ಎಂದು ವಿಷಾದಿಸಿದರು.

## ಬಾಲ್ಯ ವಿವಾಹ ; ಪ್ರಕರಣ ದಾಖಲಿಸುವುದರಿಂದ ಸಮಸ್ಯೆ ಬಗೆಹರಿಯದು : ಸುಪ್ರೀಂ ಕೋರ್ಟ್



ನವದೆಹಲಿ, ಜು. 10 - ಬಾಲ್ಯ ವಿವಾಹ ಪ್ರಕರಣದಲ್ಲಿ ಭಾಗಿಯಾದವರ ವಿರುದ್ಧ ಪ್ರಕರಣ ದಾಖಲಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈ ಸಮಸ್ಯೆಯಲ್ಲಿ ಸಾಮಾಜಿಕ ಅಂಶಗಳಿವೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ದೇಶದಲ್ಲಿ ಬಾಲ್ಯ ವಿವಾಹಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ದಾಖಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಬಾಲ್ಯ ವಿವಾಹ ತಡೆಗಾಗಿ ಅರಿವು ಮೂಡಿಸುವ ಹಾಗೂ ತರಬೇತಿ ನೀಡುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ತಿಳಿಸಿತು. ಇದಕ್ಕೆ ತೃಪ್ತವಾಗದ ಸುಪ್ರೀಂ ಕೋರ್ಟ್, ಈ ರೀತಿಯ ಕಾರ್ಯಕ್ರಮಗಳು ಹಾಗೂ ಬೋಧನೆಗಳಿಂದ ವಾಸ್ತವವಾಗಿ ಯಾವುದೇ ಬದಲಾವಣೆಯಾಗುವುದಿಲ್ಲ ಎಂದು ತಿಳಿಸಿತು.

ಸರ್ಕಾರೇತರ ಸಂಘಟನೆಯಾದ ಸೊಸೈಟಿ ಫಾರ್ ಎನ್‌ಲೈಟನ್‌ಮೆಂಟ್ ಅಂಡ್ ವಾಲಂಟರಿ ಆಕ್ಷನ್, ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿ, ಬಾಲ್ಯ ವಿವಾಹ ತಡೆ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುತ್ತಿಲ್ಲ ಎಂದು ಹೇಳಿತ್ತು.

ಈ ಬಗ್ಗೆ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಇದು ಕೇವಲ ಪ್ರಕರಣ ದಾಖಲಿಸುವ ವಿಷಯವಲ್ಲ. ಪ್ರಕರಣ ದಾಖಲಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಈ ವಿಷಯ ಸಾಮಾಜಿಕ ಅಂಶಗಳನ್ನು ಒಳಗೊಂಡಿದೆ ಎಂದು ತಿಳಿಸಿತು.

# ಸೈನ್ಯಕ್ಕೆ ಭಾರತೀಯರನ್ನು ಬಯಸಿರಲಿಲ್ಲ : ರಷ್ಯಾ

ನವದೆಹಲಿ, ಜು. 10 - ರಷ್ಯಾದ ಸೈನ್ಯದ ಸಹಾಯಕ ಹುದ್ದೆಗೆ ಭಾರತೀಯರನ್ನು ನೇಮಿಸಿಕೊಂಡಿರುವುದು ಕೇವಲ ವಾಣಿಜ್ಯ ವಿಚಾರ ಎಂದು ರಷ್ಯಾ ತಿಳಿಸಿದೆ.

ಸೈನ್ಯದ ಸಹಾಯಕರಾಗಿ ನೇಮಿಸಿಕೊಂಡಿರುವ ಭಾರತೀಯರನ್ನು ವಾಪಸ್ ಕಳಿಸುವಂತೆ ಭಾರತ ಮಾಡಿಕೊಂಡಿರುವ ಮನವಿಯ ಬಗ್ಗೆ ತ್ವರಿತವಾಗಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದೂ ರಷ್ಯಾ ಹೇಳಿದೆ.

ಈ ಬಗ್ಗೆ ರಷ್ಯಾ ಸರ್ಕಾರದ ಪರವಾಗಿ ಮೊದಲ ಬಾರಿ ಪ್ರತಿಕ್ರಿಯೆ ನೀಡಿರುವ ರಷ್ಯಾದ ರಾಯಭಾರಿ ರೊಮನ್ ಬಬುಶ್ಕಿನ್, ಭಾರತೀಯರು ರಷ್ಯಾ ಸೈನ್ಯದ ಭಾಗವಾಗಲಿ ಎಂದು ನಾವು ಎಂದು ಬಯಸಿರಲಿಲ್ಲ. ಸಂಘರ್ಷದಲ್ಲಿ ಅವರ ಪಾತ್ರ ನಗಣ್ಯ ಎಂದು ಹೇಳಿದರು.

ಈ ವಿಷಯದಲ್ಲಿ ನಾವು ಭಾರತ ಸರ್ಕಾರದ ಪರ ಇದ್ದೇವೆ. ಈ ವಿಷಯ ಶೀಘ್ರ ಬಗೆಹರಿಯಲಿದೆ ಎಂಬ ಆಶಯವಿದೆ ಎಂದವರು ಹೇಳಿದ್ದಾರೆ.

## ರಾಮನಗರ ಹೆಸರು ಬದಲಾವಣೆ ಬಗ್ಗೆ ಸಂಪುಟದಲ್ಲಿ ನಿರ್ಧಾರ : ಸಿಎಂ

ಮೈಸೂರು, ಜು. 10 - ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಎಂದು ಬದಲಿಸುವ ಬಗ್ಗೆ ರಾಜ್ಯ ಸಂಪುಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರಾಮನಗರ ಜಿಲ್ಲೆಯ ಹೆಸರು ಬದಲಿಸಬೇಕೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿತ್ತು.

# ಉಗ್ರರಿಂದ ಕಾಶ್ಮೀರದಲ್ಲಿ ಅಮೆರಿಕದ ಎಂ4 ರೈಫಲ್ ಬಳಕೆ

ನವದೆಹಲಿ, ಜು. 10 - ಅಮೆರಿಕ ನಿರ್ಮಿತ ಎಂ4 ಕಾರ್ಬೈನ್ ರೈಫಲ್‌ಗಳನ್ನು ಉಗ್ರರು ಕಾಶ್ಮೀರದಲ್ಲಿ ಬಳಸುತ್ತಿರುವುದು ಕಳವಳಕಾರಿ ಎಂದು ಪರಿಣಿತರು ಹೇಳಿದ್ದಾರೆ. ಕೆಲ ವರ್ಷಗಳಿಂದ ಉಗ್ರರು ಈ ರೈಫಲ್‌ಗಳನ್ನು ಬಳಸುತ್ತಿದ್ದಾರೆ. ಅದರಲ್ಲೂ ಕಳೆದ ವರ್ಷ ಈ ರೈಫಲ್‌ಗಳ ಬಳಕೆ ಹೆಚ್ಚಾಗಿದೆ.

2021 ರಲ್ಲಿ ಅಮೆರಿಕದ ಸೈನ್ಯ ಆಫ್ಘಾನಿಸ್ತಾನದಿಂದ ಹೊರ ಹೋಗುವಾಗ ಈ ಬಂದೂಕುಗಳು ಪಾಕಿಸ್ತಾನದ ಉಗ್ರರ ಕೈಗೆ ಸೇರಿರಬಹುದು ಎಂದು ಶಂಕಿಸಲಾಗಿದೆ.

ಎಂ4 ರೈಫಲ್‌ಗಳು ಹಗುರ, ಅನಿಲ ಆಧರಿತ, ಹೆಗಲ ಮೇಲಿಂದ ಗುಂಡು ಹಾರಿಸುವ ಸ್ವರೂಪದ್ದಾಗಿವೆ. 1980ರ ನಂತರ ಈ ರೀತಿಯ ಐದು ಲಕ್ಷ ರೈಫಲ್‌ಗಳನ್ನು ಉತ್ಪಾದಿಸಲಾಗಿದೆ. ಇವು ಪ್ರತಿ ನಿಮಿಷ 970 ಸುತ್ತುಗಳವರೆಗೆ ಗುಂಡು ಹಾರಿಸಬಲ್ಲವು ಹಾಗೂ 600 ಮೀಟರ್ ದೂರದವರೆಗೆ ಸಿಡಿಯಬಲ್ಲವು.

ಈ ರೈಫಲ್‌ಗಳನ್ನು ನ್ಯಾಟೋ ಪಡೆಗಳು ವ್ಯಾಪಕವಾಗಿ ಬಳಸಿದ್ದವು. ಪಾಕಿಸ್ತಾನ ಸೇರಿದಂತೆ ಹಲವೆಡೆ ಸೈನ್ಯದಲ್ಲಿ ಬಳಕೆಯಾಗಿತ್ತು. ಸಿರಿಯಾ ಅಂತರ್ ಯುದ್ಧ, ಇರಾಕ್ ಯುದ್ಧ, ಯಮನ್ ಯುದ್ಧ, ಕಾಂಬೋಡಿಯ ಸಂಘರ್ಷ, ಕೊಸೊವೊ ಸಮರ, ಇರಾಕ್ ಹಾಗೂ ಆಫ್ಘಾನ್ ಯುದ್ಧಗಳಲ್ಲೂ ಇವುಗಳನ್ನು ಬಳಸಲಾಗಿತ್ತು. ಅಮೆರಿಕದ ಸೈನ್ಯ ಆಫ್ಘಾನಿಸ್ತಾನದಿಂದ ಹಿಂದೆ ಸರಿಯುವಾಗ ಭಾರೀ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಬಿಟ್ಟು ತೆರಳಿತ್ತು. ಬಹಳಷ್ಟು ಶಸ್ತ್ರಗಳನ್ನು ನಾಶಗೊಳಿಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿತ್ತು. ಆದರೆ ಸಾಕಷ್ಟು ಶಸ್ತ್ರಗಳು ಉಗ್ರರ ಕೈ ಸೇರಿವೆ ಎಂದು ರಕ್ಷಣಾ ಪರಿಣಿತ ಲೆಫ್ಟಿನೆಂಟ್ ಜನರಲ್ ಸಂಜಯ್ ಕುಲಕರ್ಣಿ ಹೇಳಿದ್ದಾರೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆಗಳು ಸುಧಾರಿತ ಶಸ್ತ್ರಗಳನ್ನು ಉಗ್ರರಿಗೆ ಒದಗಿಸಿವೆ. ಉಗ್ರರು ಶಸ್ತ್ರಗಳನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ತಮ್ಮ ದುರುದ್ದೇಶಗಳಿಗೆ ಬಳಸುತ್ತಿದ್ದಾರೆ ಎಂದು ಕುಲಕರ್ಣಿ ಹೇಳಿದ್ದಾರೆ.

## ಕೊಟ್ಟೂರಿನಲ್ಲಿ ಇಂದು ಕ್ಯಾನ್ಸರ್ ತಪಾಸಣಾ ಶಿಬಿರ

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರವನ್ನು ಅಕ್ಷಯ ಆಸ್ಪತ್ರೆಯಲ್ಲಿ ಇಂದು ಏರ್ಪಡಿಸಲಾಗಿದೆ ಎಂದು ಡಾ. ಕೆ.ಎಂ. ಪ್ರತಿಮ ಪ್ರಭುರಾಜ ತಿಳಿಸಿದ್ದಾರೆ. ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಮತ್ತು ಡಾ. ಕೆ.ಎಂ. ಪ್ರಭುರಾಜ್ ಅಕ್ಷಯ್ ಆಸ್ಪತ್ರೆಯ ಸಹಯೋಗದಲ್ಲಿ ಈ ಶಿಬಿರ ನಡಯಲಿದೆ.

# ಡೆಂಗ್ಯೂ ಕಾಯಿಲೆ ಬಗ್ಗೆ ಭಯ ಬೇಡ, ಜಾಗೃತಿ ವಹಿಸಿ

## ಮಲೇಬೆನ್ನೂರಿನ ಡೆಂಗ್ಯೂ ಜಾಗೃತಿ ಸಭೆಯಲ್ಲಿ ಟಿಹೆಚ್‌ಓ ಡಾ. ಖಾದರ್



ಮಲೇಬೆನ್ನೂರು, ಜು.10- ಡೆಂಗ್ಯೂ ಕಾಯಿಲೆ ಬಗ್ಗೆ ಭಯಬೇಡ. ಆದರೆ, ಜಾಗೃತಿ ಬಹಳ ಮುಖ್ಯ ಎಂದು ಟಿಹೆಚ್‌ಓ ಡಾ. ಅಬ್ದುಲ್ ಖಾದರ್ ಹೇಳಿದರು.

ಪಟ್ಟಣದ ಪುರಸಭೆ ಕೌನ್ಸಿಲ್ ಸಭಾಂಗಣದಲ್ಲಿ ಡಯೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ಮಲೇರಿಯಾ ತಡೆಗಟ್ಟುವ ಕುರಿತು ಇಂದು ಹಮ್ಮಿಕೊಂಡಿದ್ದ ಜಾಗೃತಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಳೆಗಾಲ ಬಂದಿರುವುದರಿಂದ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಹೆಚ್ಚಾಗಿದ್ದು, ಮನೆಯ ಸುತ್ತಮುತ್ತಲಿನ ಪ್ರದೇಶವನ್ನು ಎಲ್ಲರೂ ಸ್ವಚ್ಛವಾಗಿ ಇಟ್ಟುಕೊಳ್ಳಬೇಕು. ನೀರು ಸಂಗ್ರಹ ಮಾಡುವ ತೊಟ್ಟಿ, ಡ್ರಮ್ ಇತ್ಯಾದಿಗಳನ್ನು ಹಾಗಾಗ ಸ್ವಚ್ಛ ಮಾಡಬೇಕು. ನೀರು ಇದ್ದಾಗ ಮುಚ್ಚಬೇಕು. ಪುರಸಭೆಯಿಂದ ಪಟ್ಟಣದಲ್ಲಿ ಫಾಗಿಂಗ್ ಮಾಡಿಸಬೇಕೆಂದು ಡಾ. ಖಾದರ್ ತಿಳಿಸಿದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಅವರು, ಪಟ್ಟಣದಲ್ಲಿ ಡೆಂಗ್ಯೂ, ಚಿಕನ್ ಗುನ್ಯಾ ಕುರಿತು ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳನ್ನು ತಿಳಿಸಿ, ಈಗಾಗಲೇ 2ನೇ ಹಂತದ ಫಾಗಿಂಗ್ ಮಾಡಲಾಗಿದೆ. ಡೆಂಗ್ಯೂ ಕುರಿತು ಕರಪತ್ರಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಿದ್ದೇವೆ ಎಂದರು.

ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಉಮ್ಮಣ್ಣ ಮಾತನಾಡಿ, ಡೆಂಗ್ಯೂ ಉಲ್ಬಣಗೊಳ್ಳುತ್ತಿದ್ದು, ಸಾವಿನ ಪ್ರಕರಣಗಳು ಹೆಚ್ಚಾಗುತ್ತಿವೆ. ಡೆಂಗ್ಯೂ ಜ್ವರ ಕೋವಿಡ್‌ಗಿಂತ ಅಪಾಯಕಾರಿಯಾಗಿದ್ದು, ಇದಕ್ಕೆ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಹಾಗಾಗಿ ಯಾವುದೇ ಜ್ವರ ಬಂದರೂ ತಕ್ಷಣ ವೈದ್ಯರನ್ನು ಸಂಪರ್ಕಿಸಿ, ಚಿಕಿತ್ಸೆ ಪಡೆದುಕೊಳ್ಳಿ ಮತ್ತು 3-4 ದಿನಗಳ ನಂತರವೂ ಜ್ವರ ಇದ್ದರೆ, ರಕ್ತ ಪರೀಕ್ಷೆ ಮಾಡಿಸಿ ಎಂದರು.

ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಮಾತನಾಡಿ, ಡೆಂಗ್ಯೂ, ಚಿಕನ್ ಗುನ್ಯಾ ರೋಗಗಳ ಲಕ್ಷಣಗಳನ್ನು ತಿಳಿಸಿ, ಯಾವ ಸೊಳ್ಳೆಯಲ್ಲಿ ವೈರಸ್ ಇದೆ ಎಂದು ಗುರುತಿಸಲು ಆಗಲ್ಲ. ಹಾಗಾಗಿ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಸೊಳ್ಳೆ ಕಚ್ಚದಂತೆ ನೋಡಿಕೊಳ್ಳಿ ಎಂದರು.

ಡೆಂಗ್ಯೂ ಸೊಳ್ಳೆ ಶುದ್ಧ ನೀರಿನಲ್ಲಿ ಬೆಳೆದರೆ, ಮಲೇರಿಯಾ ಸೊಳ್ಳೆ ಕೊಳಚೆ ನೀರಿನಲ್ಲಿ ಬೆಳೆಯುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಸ್ವಚ್ಛತೆಗೆ ಒತ್ತು ನೀಡಬೇಕು. ಡೆಂಗ್ಯೂ ಜ್ವರ ಹರಡುವ ಕಾಯಿಲೆ ಆಗಿರುವುದರಿಂದ ಅದನ್ನು ಆರಂಭದಲ್ಲೇ ಗುಣಪಡಿಸಿಕೊಳ್ಳಬೇಕು.

ಜ್ವರ ಬಂದರೆ ರಕ್ತ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು. ಮನೆಯಲ್ಲಿ ವಾರಕ್ಕೆ ಒಂದು ದಿನ ಡ್ರೈಡೇ ಮಾಡಿ, ಮನೆಯಲ್ಲಿ ಸಂಗ್ರಹಿಸುವ ಎಲ್ಲಾ ನೀರನ್ನು ಸ್ವಚ್ಛ ಮಾಡಿ, ಪುನಃ ನೀರನ್ನು ತುಂಬಿಸಿಕೊಳ್ಳಿ ಎಂದು ಡಾ. ಲಕ್ಷ್ಮಿದೇವಿ ಹೇಳಿದರು.

ಉಪತಹಶೀಲ್ದಾರ್ ಆರ್.ರವಿ ಮಾತನಾಡಿ, ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸಮುದಾಯ ಸಹಭಾಗಿತ್ವ ಮುಖ್ಯ ಎಂದರು.

ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ನಯಾಜ್, ಸಾಬೀರ್ ಅಲಿ, ಬಿ.ವೀರಯ್ಯ, ಭೋವಿ ಕುಮಾರ್, ಯುಸೂಫ್ ಮತ್ತಿತರರು ಮಾತನಾಡಿ, ಡೆಂಗ್ಯೂ ತಡೆಗಟ್ಟಲು ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಪುರಸಭೆ ಸದಸ್ಯರಾದ ಬಿ.ಮಂಜುನಾಥ್, ಷಾ ಅಬ್ರಾರ್, ಬೆಣ್ಣೆಹಳ್ಳಿ ಸಿದ್ದೇಶ್, ಭೋವಿ ಶಿವು, ಟಿ. ಹನುಮಂತಪ್ಪ, ಶಬ್ಬೀರ್ ಖಾನ್, ಎ.ಆರೀಫ್ ಅಲಿ, ಬುಡ್ಡವರ್ ರಫೀಕ್ ಸಾಬ್, ಬಸವರಾಜ್ ದೊಡ್ಮನಿ, ಕೆ.ಪಿ.ಗಂಗಾಧರ್, ಚಮನ್ ಷಾ, ಎಂ.ಬಿ.ರುಸ್ತುಂ, ಪುರಸಭೆ ಅಧಿಕಾರಿಗಳಾದ ದಿನಕರ್, ನವೀನ್, ಶಿವರಾಜ್ ಮತ್ತಿತರರು ಸಭೆಯಲ್ಲಿದ್ದರು.

# ಶ್ರಾವಣ ಮಾಸದ ನಂತರ ರಾಂಪುರ ಮಠಕ್ಕೆ ನೂತನ ವಟು ಆಯ್ಕೆ : ಕಾಶಿ ಜಗದ್ಗುರುಗಳು



## ಅವಿತಿಟ್ಟ ವಟುವಿನ ಹೆಸರಿರುವ ಚೀಟಿ ತರಲಿಲ್ಲ ಉತ್ಸವ ದೇವರ ಪಲ್ಲಕ್ಕಿ

## ರಾಂಪುರ ಹಾಲಸ್ವಾಮಿ ಮಠಕ್ಕೆ ನೂತನ ವಟುವಿನ ಆಯ್ಕೆಗೆ ಆಷಾಢ ಮಾಸ ಅಡ್ಡಿಯಾಯಿತೇ ?

## ಕಾಶಿ ಶ್ರೀಗಳಿಂದ ಬರಲಿಲ್ಲ ಉತ್ತರ ! ನೆರೆದ ಭಕ್ತರು ತತ್ತರ

ಹೊನ್ನಾಳಿ, ಜು. 10 - ಪವಾಡಕ್ಕೆ ಹೆಸರಾದ ಹೊನ್ನಾಳಿ ತಾಲ್ಲೂಕು ರಾಂಪುರ ಗ್ರಾಮದ ತುಂಗಭದ್ರಾ ನದಿ ದಡದಲ್ಲಿರುವ ಕಾಶಿ ಪೀಠದ ಶಾಖಾ ಮಠಗಳಲ್ಲಿ ಒಂದಾದ ಪುತ್ರವರ್ಗ ಮಠ, ಶ್ರೀ ಸದ್ಗುರು ಶಿವಯೋಗಿ ಹಾಲಸ್ವಾಮಿ ಬೃಹನ್ಮಠದ ನೂತನ ವಟುವಿನ ಆಯ್ಕೆಯನ್ನು ಬುಧವಾರ ಏರ್ಪಡಿಸಲಾಗಿತ್ತು.

ಗ್ರಾಮದ ಕರ್ತೃ ಗದ್ದುಗೆಯ ಆವರಣದಲ್ಲಿ ಶ್ರೀ ಮಠದ ಪಾದುಕೆಯ ಪಲ್ಲಕ್ಕಿಯ ಉತ್ಸವ ಮೂರ್ತಿಯ ಮೂಲಕ ಶ್ರೀ ಕಾಶಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ, ನಾಡಿನ ಹಲವಾರು ಸ್ವಾಮೀಜಿಗಳ ಉಪಸ್ಥಿತಿಯಲ್ಲಿ, ಸರ್ವಭಕ್ತರ ಸಮ್ಮುಖದಲ್ಲಿ ದಿನವಿಡೀ ನಿರೀಕ್ಷಿಸಿದರೂ ಸಹ ಉತ್ಸವ ಪಲ್ಲಕ್ಕಿ, ಗ್ರಾಮದ 8 ಸ್ಥಳದಲ್ಲಿ ಅವಿತಿಟ್ಟ ವಟುವಿನ ಹೆಸರು ಬರೆದ ಚೀಟಿ ತರದೇ ಹೋದ ಕಾರಣಕ್ಕೆ ಆಯ್ಕೆಯನ್ನು ಮುಂದಿನ ದಿನಗಳಲ್ಲಿ ನಡೆಸಲಾಗುವುದು ಎಂದು ನೆರೆದ ಧರ್ಮಸಭೆಯಲ್ಲಿ ಸರ್ವಭಕ್ತರ ಅಪೇಕ್ಷೆಯ ಮೇರೆಗೆ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ನಿರ್ಣಯ ಕೈಗೊಂಡರು.

ಬೆಳಿಗ್ಗೆ ಗ್ರಾಮದ 8 ಸ್ಥಳಗಳಲ್ಲಿ ಅಪೇಕ್ಷೆ ಬಯಸಿದ ಎಂಟು ವಟುಗಳ ಹೆಸರು ಬರೆದ ಚೀಟಿಯನ್ನು 8 ಕವರ್‌ಗಳಲ್ಲಿ ಹಾಕಿ ಇರಿಸಲಾಗಿತ್ತು, ನಂತರ ಹಾಲಸ್ವಾಮಿ ಕರ್ತೃ ಗದ್ದುಗೆಯ ಕಲ್ಮಠದ ಉತ್ಸವ ಪಲ್ಲಕ್ಕಿ ಹೊರಡಿಸಿ, ಎಂಟು ಚೀಟಿಯಲ್ಲಿ ಒಂದು ಚೀಟಿ ತರುವಂತೆ, ಆ ಚೀಟಿಯಲ್ಲಿ ಇರುವ ಹೆಸರಿನವರನ್ನು ನೂತನ ವಟುವಾಗಿ ಆಯ್ಕೆ ಮಾಡಲು ನಿರ್ಣಯಿಸಲಾಗಿತ್ತು.


ಮೂರು ಬಾರಿ ಉತ್ಸವ ಪಲ್ಲಕ್ಕಿಯನ್ನು ಗ್ರಾಮದ ಒಳಗಡೆ ತೆಗೆದುಕೊಂಡು ಹೋದರೂ ಸಹ ಚೀಟಿ ತರಲು ಪಲ್ಲಕ್ಕಿ ಇಚ್ಚಿಸದ ಕಾರಣ, ನೆರೆದಿದ್ದ ಭಕ್ತರು ಆಷಾಢ ಮಾಸದ ಕಾರಣಕ್ಕೆ ನೂತನ ವಟುವಿನ ಆಯ್ಕೆ ಪಲ್ಲಕ್ಕಿ ಒಪ್ಪುತ್ತಿಲ್ಲ ಎಂದು ಭಾವಿಸಿದರಾದರೂ? ಇದೇ ಪ್ರಶ್ನೆಯನ್ನು ಮಾಧ್ಯಮ ಪ್ರತಿನಿಧಿಗಳು ಕಾಶಿ ಶ್ರೀಗಳಿಗೆ ಕೇಳಿದಾಗ ಇದಕ್ಕೆ ಏನನ್ನೂ ಉತ್ತರಿಸದ ಕಾಶಿ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಗದ್ದುಗೆ ಮಠದ ಕಡೆ ಕೈ ತೋರಿದರು.

ಇದಕ್ಕೂ ಮೊದಲು ಧರ್ಮಸಭೆ ಉದ್ದೇಶಿಸಿ ಮಾತನಾಡಿದ ಕಾಶಿ ಶ್ರೀಗಳು, ಆಷಾಢ ಮಾಸ ಮತ್ತು ಶ್ರಾವಣ ಮಾಸ ಕಳೆದ ನಂತರದಲ್ಲಿ ಕಲ್ಮಠದ ಉತ್ಸವ ಪಲ್ಲಕ್ಕಿ ಹೇಳಿದ ರೀತಿಯಲ್ಲಿಯೇ, ಆಯ್ಕೆ ಪ್ರಕ್ರಿಯೆ ನಡೆಸಿ ಶ್ರೀಮಠಕ್ಕೆ ನೂತನ ವಟು ಆಯ್ಕೆ ಮಾಡೋಣ ಎಂದು ಹೇಳಿ ಧರ್ಮಸಭೆ ಅಂತ್ಯಗೊಳಿಸಿದರು.

ಧರ್ಮಸಭೆಯಲ್ಲಿ ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಚನ್ನಮಲ್ಲಿಕಾರ್ಜುನ ಸ್ವಾಮೀಜಿ, ದುಗ್ಗಾವತಿ ಮಠದ ಶ್ರೀ ವೀರಭದ್ರ ಸ್ವಾಮೀಜಿ, ಚನ್ನಗಿರಿಯ ಹಿರೇಮಠದ ಶ್ರೀ ಕೇದಾರ ಶಿವಶಾಂತಲಿಂಗ ಸ್ವಾಮೀಜಿ, ಬುಕ್ಕಸಾಗರ ಕರಿಸಿದ್ದೇಶ್ವರ ಮಠದ ಶ್ರೀ ಬಾಲ ಶಿವಯೋಗಿ ಕರಿಸಿದ್ದೇಶ್ವರ ಸ್ವಾಮೀಜಿ, ಮಣಕೂರು ಶ್ರೀ ಹಾಲಸ್ವಾಮಿ ಶಾಖಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ, ಗೋವಿನಕೋವಿ ಹಾಲಸ್ವಾಮೀಜಿ ಮಠದ ಸದ್ಗುರು ಶ್ರೀ ಶಿವಯೋಗಿ ಮಹಾಲಿಂಗ ಹಾಲಸ್ವಾಮೀಜಿ, ಹಾಲಸ್ವಾಮೀಜಿ ಶಾಖಾಮಠಗಳ ನಾಗತಿಹಳ್ಳಿ, ಬಸಾಪುರ ಶ್ರೀ ಗಿರಿರಾಜ ಹಾಲಸ್ವಾಮೀಜಿ, ಶ್ರೀ ಅಡವಿಹಳ್ಳಿ ಹಾಲಸ್ವಾಮೀಜಿ, ಶ್ರೀ ಗಂಗಾಧರ ಹಾಲಸ್ವಾಮೀಜಿ, ಹನುಮನಹಳ್ಳಿ ಮಠದ ಶ್ರೀ ಓಂಕಾರ ಹಾಲಸ್ವಾಮೀಜಿ, ಹಿರೇಹಡಗಲಿ ಅಭಿನವ ಶ್ರೀ ಹಾಲಶ್ರೀ, ದಾವಣಗೆರೆಯ ಯರಕುಂಟೆ ಮಠದ ಶ್ರೀ ಪರಮೇಶ್ವರಯ್ಯ ಸ್ವಾಮೀಜಿ, ನಂದಿಗಾವಿ ಹಾಲಸ್ವಾಮಿ, ಶಾಖಾ ಮಠದ ಹಾಲಸ್ವಾಮೀಜಿಗಳು ಉಪಸ್ಥಿತರಿದ್ದರು.

ಶಾಸಕ ಡಿ.ಜಿ.ಶಾಂತನಗೌಡ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಮಾಜಿ ಕಾಡ ಅಧ್ಯಕ್ಷ ಗಿರೀಶ್ ಪಾಟೀಲ್, ಬೇಡ ಜಂಗಮ ಸಮಾಜದ ತಾಲ್ಲೂಕು ಅಧ್ಯಕ್ಷ ಭೈರನಹಳ್ಳಿ ಪಂಚಾಕ್ಷರಯ್ಯ ಸೇರಿದಂತೆ, ಇತರ ಗಣ್ಯಾತಿಗಣ್ಯರು, ಹಲವು ಜಿಲ್ಲೆಗಳಿಂದ ಆಗಮಿಸಿ ಧರ್ಮಸಭೆಯಲ್ಲಿ ಉಪಸ್ಥಿತರಿದ್ದರು.

# ಏರುತ್ತಿರುವ ಜನಸಂಖ್ಯೆಗೆ ಹಾಕಲೇಬೇಕು ಕಡಿವಾಣ



**ಇಂದು ವಿಶ್ವ ಜನಸಂಖ್ಯಾ ದಿನಾಚರಣೆ**

ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಎದುರಿಸುತ್ತಿದ್ದ ಹತ್ತು ಹಲವು ಸಮಸ್ಯೆಗಳನ್ನು ಇಂದಿಗೂ ಎದುರಿಸುತ್ತಿದ್ದು, ಅವುಗಳಲ್ಲಿ ಪ್ರಮುಖವಾಗಿ ಬಡತನ, ವಸತಿ, ಅನಕ್ಷರತೆ, ನಿರುದ್ಯೋಗ, ವಲಸೆ ಸಮಸ್ಯೆ ಇತ್ಯಾದಿ. ಈ ಸಮಸ್ಯೆಗಳು ಉಂಟಾಗಲು ಮೂಲ ಕಾರಣ ಏರುತ್ತಿರುವ ಜನಸಂಖ್ಯೆ. ಇದನ್ನು ನಿಯಂತ್ರಿಸದ ಹೊರತು ಯಾವುದೇ ಸಮಸ್ಯೆಗಳಿಗೆ ಪರಿಹಾರ ದೊರಕದು. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಹಾಗೂ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಜನಸಂಖ್ಯಾ ಏರಿಕೆಯಿಂದ ಆಗುವ ಸಮಸ್ಯೆಗಳು, ಇದರ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಅರಿವು ಮೂಡಿಸಲು ಪ್ರತಿ ವರ್ಷ ಜುಲೈ 11 ರಂದು ವಿಶ್ವ ಜನಸಂಖ್ಯಾ ದಿನವನ್ನು ಸಾರ್ವತ್ರಿಕವಾಗಿ ಎಲ್ಲೆಡೆ ಆಚರಿಸಲಾಗುವುದು. ಇದರ ಆಚರಣೆಯ ಮೂಲ ಉದ್ದೇಶ ಕುಟುಂಬ ಯೋಜನೆಯ ಪ್ರಾಮುಖ್ಯತೆ, ಲಿಂಗ ಸಮಾನತೆ, ಬಡತನ, ತಾಯಿಯ ಆರೋಗ್ಯ ಮತ್ತು ವಿವಿಧ ಜನಸಂಖ್ಯಾ ಸಮಸ್ಯೆಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದಾಗಿದೆ.

1987 ಜುಲೈ 11 ರಂದು ವಿಶ್ವದ ಜನಸಂಖ್ಯೆ 5 ಬಿಲಿಯನ್ ( 500 ಕೋಟಿ) ತಲುಪಿದ್ದರ ಸವಿನೆನಪಿಗಾಗಿ ವಿಶ್ವಸಂಸ್ಥೆ ಈ ದಿನವನ್ನು ವಿಶ್ವ ಜನಸಂಖ್ಯಾ ದಿನವನ್ನಾಗಿ ಆಚರಿಸಲು ಘೋಷಿಸಿತು. ಇದರ ಮೊದಲ ಆಚರಣೆಯನ್ನು 1990 ರ ಜುಲೈ 11 ರಂದು ಮಾಡಲಾಯಿತು. ಈ ವರ್ಷದ ವಿಶ್ವ ಜನಸಂಖ್ಯಾ ದಿನದ ಆಚರಣೆಯ ಉದ್ದೇಶ "ಹೆಚ್ಚುತ್ತಿರುವ ಜಾಗತಿಕ ಜನಸಂಖ್ಯೆಯಿಂದ ಎದುರಿಸುತ್ತಿರುವ ಸವಾಲುಗಳು" (ongoing challenges posed by a growing global population) ಎಂಬುದಾಗಿದೆ.

ಪ್ರಸ್ತುತ ಅಂಕಿ-ಅಂಶಗಳನ್ನು ಗಮನಿಸಿದಾಗ ಭಾರತ (144 ಕೋಟಿ) ಚೀನಾ (142 ಕೋಟಿ) ಕ್ಕಿಂತ ಜನಸಂಖ್ಯೆಯ ಪ್ರಮಾಣದಲ್ಲಿ ಮುಂದಿದೆ. ಇದುವರೆಗೆ ಜನಸಂಖ್ಯಾ ಗಾತ್ರದಲ್ಲಿ ಎರಡನೇ ಸ್ಥಾನದಲ್ಲಿದ್ದ ಭಾರತ, ಕಳೆದ ವರ್ಷದಿಂದ ಮೊದಲ ಸ್ಥಾನವನ್ನು ಗಳಿಸಿ, ಇಡೀ ವಿಶ್ವದಲ್ಲಿ ಅಚ್ಚರಿ ಮೂಡಿಸಿದೆ. ವಿಶ್ವದ ಒಟ್ಟು ಜನರಲ್ಲಿ ಶೇ.18.01ರಷ್ಟು ಭಾರತೀಯರೇ ಇದ್ದಾರೆ. ನಮ್ಮ ದೇಶದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಇದು ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆಯಲ್ಲದೆ ಇದು ಬಡತನ, ನಿರುದ್ಯೋಗ, ಅನಕ್ಷರತೆ, ಆಂತರಿಕ ವಲಸೆ, ಸಾರಿಗೆ ಸೌಲಭ್ಯಗಳ ಕೊರತೆ, ಆಹಾರ ಸಮಸ್ಯೆ, ವಸತಿ ಸಮಸ್ಯೆಗಳಿಗೆ ನೇರವಾಗಿ ಕಾರಣವಾಗುತ್ತದೆ. ಪ್ರಸ್ತುತ ಜನಸಂಖ್ಯಾ ಗಾತ್ರ ಅಧಿಕಗೊಳ್ಳಲು ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಸರ್ಕಾರ ಹಾಗೂ ಜನತೆ ಸರಿಯಾಗಿ ಪಾಲನೆ ಮಾಡದಿರುವುದೇ ಆಗಿದೆ.

ಈ ಹಿನ್ನೆಲೆಯಲ್ಲಿ ಇಂತಹ ಮೂಲಭೂತ ಸಮಸ್ಯೆಗಳನ್ನು ನಿವಾರಿಸಲು ಆಳುವ ಸರ್ಕಾರಗಳು ಕೈ ಹಾಕದಿದ್ದಲ್ಲಿ ಮುಂದೆ ಇದಕ್ಕಿಂತ ಭೀಕರ ಸಮಸ್ಯೆಗಳನ್ನು ಎದುರಿಸಬೇಕಾದೀತು. ಭಾರತೀಯರ ಭವಿಷ್ಯ ಕೇವಲ ಸರ್ಕಾರದ ಮೇಲಿಲ್ಲ. ಅದು ಪ್ರತಿಯೊಬ್ಬ ನಾಗರಿಕನ ಕೈಲಿದೆ. ನಮ್ಮ ದೇಶದಲ್ಲಿ ಯುವಕರ ಸಂಖ್ಯೆ ಹೆಚ್ಚಿದ್ದು, ಅವರೆಲ್ಲರೂ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿಕೊಂಡಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ. ಚೀನಾದಂತಹ ರಾಷ್ಟ್ರದಲ್ಲಿ ಪ್ರತಿಯೊಬ್ಬರೂ ದುಡಿದು ತಿನ್ನಬೇಕು. ಆದರೆ ಭಾರತದಲ್ಲಿ "ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು" ಎಂಬಂತೆ ದುಡಿದು ತಿನ್ನುವವರಿಗಿಂತ ಕೂತು ತಿನ್ನುವ ಜನರೇ ಜಾಸ್ತಿ. ಇದರಿಂದ ದೇಶದ ಸಂಪತ್ತು ಕರಗಿ ಹೋಗುವುದರ ಜೊತೆಗೆ ಪ್ರತಿಯೊಬ್ಬರ ಭವಿಷ್ಯ ಮಸುಕಾಗುತ್ತದೆ. ಈ ಸಮಸ್ಯೆಯಿಂದ ಹೊರಗೆ ಬರಲು ಎಲ್ಲರೂ ದುಡಿದು ತಿನ್ನಬೇಕು ಇಲ್ಲವೇ ತೀವ್ರವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಕಡಿವಾಣ ಹಾಕಲೇಬೇಕು, ಹಾಗಾದಾಗ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯ. ಈ ನಿಟ್ಟಿನಲ್ಲಿ ಜನಸಂಖ್ಯಾ ಏರಿಕೆಯ ಪ್ರಮಾಣವನ್ನು ಆದಷ್ಟು ಮಟ್ಟಿಗೆ ನಿಯಂತ್ರಿಸಲು ಕೆಲವೊಂದು ದಿಟ್ಟ ಕ್ರಮಗಳನ್ನು ವೈಯಕ್ತಿಕವಾಗಿ ಹಾಗೂ ಸರ್ಕಾರದ ಮಟ್ಟದಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಹೆಚ್ಚಿದೆ, ಅಂದರೆ :

*** ಮಹಿಳೆಯರನ್ನು ಸಬಲೀಕರಣಗೊಳಿಸುವುದು**
*** ಶಾಸನ ಸಭೆಗಳಲ್ಲಿ ಜನಸಂಖ್ಯಾ ನಿಯಂತ್ರಣ ಮಸೂದೆ ಯನ್ನು ಮಂಡಿಸುವುದು.**
*** ಪ್ರತಿ ವಿದ್ಯಾವಂತ ಯುವಕ-ಯುವತಿಯರು ಜನಸಂಖ್ಯಾ ಏರಿಕೆಯಿಂದ ಉಂಟಾಗುವ ಸಮಸ್ಯೆಗಳನ್ನು ತಮ್ಮ ನೆರೆ ಹೊರೆಯವರಿಗೆ ತಿಳಿಸುವುದು.**
*** ಸರ್ಕಾರಗಳು ಮಾಧ್ಯಮಗಳ ಮೂಲಕ ಚಿಕ್ಕ ಕುಟುಂಬದ ಅಗತ್ಯತೆಯ ಬಗ್ಗೆ ಅರಿವು ಮೂಡಿಸುವುದು.**
*** ಬಾಲ್ಯ ವಿವಾಹಗಳನ್ನು ತಡೆಗಟ್ಟುವುದು.**
*** ಕುಟುಂಬಕ್ಕೆ ಒಂದೇ ಮಗು ಎಂಬ ನೀತಿಯನ್ನು ಜಾರಿಗೆ ತಂದು ಇದನ್ನು ಪಾಲಿಸುವ ಕುಟುಂಬಗಳಿಗೆ ಆಕರ್ಷಕ ಬಹುಮಾನಗಳನ್ನು ನೀಡುವುದು.**
*** ಕುಟುಂಬ ಯೋಜನೆಯ ನಿಯಮ ಪಾಲಿಸದವರಿಗೆ ಸರ್ಕಾರದಿಂದ ದೊರಕುವ ಎಲ್ಲಾ ಸೌಲಭ್ಯಗಳನ್ನು ನಿಲ್ಲಿಸುವುದು.**
*** ಚುನಾವಣೆಗಳಲ್ಲಿ ಸ್ಪರ್ಧಿಸ ಬಯಸುವವರಿಗೆ ಕುಟುಂಬದ ಗಾತ್ರದ ಮೇಲೆ ಮಿತಿ ಹೇರುವುದು.**
*** ಕುಟುಂಬ ಕಲ್ಯಾಣ ಯೋಜನೆಗಳನ್ನು ಪ್ರತಿ ಕುಟುಂಬದವರು ತಪ್ಪದೇ ಅಳವಡಿಸಿಕೊಳ್ಳಲು ಸೂಚಿಸುವುದು.**
*** ಜನಸಂಖ್ಯಾ ಏರಿಕೆಯನ್ನು ತಡೆಗಟ್ಟಲು ಸಾರ್ವಜನಿಕವಾಗಿ ಚರ್ಚೆ, ಉಪನ್ಯಾಸ, ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.**
*** ಪ್ರೌಢಶಾಲಾ ಹಂತದಲ್ಲಿ ಜನಸಂಖ್ಯಾ ಶಿಕ್ಷಣ ಕುರಿತ ವಿಷಯ ಬೋಧನೆಗೆ ಆದ್ಯತೆ ಕಲ್ಪಿಸುವುದು.**

ಇಂತಹ ಹಲವು ಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೆ ತಂದಿದ್ದೇ ಆದಲ್ಲಿ ತಕ್ಕಮಟ್ಟಿಗಾದರೂ ಜನಸಂಖ್ಯಾ ಏರಿಕೆಗೆ ಕಡಿವಾಣ ಹಾಕಬಹುದು. ಈ ಮೂಲಕ ಪ್ರತಿಯೊಬ್ಬರ ಮನೆ ಮನಗಳಲ್ಲಿ ಸಂತೋಷ ಮೂಡಿಸುವ ಪ್ರಯತ್ನ ಮಾಡಬಹುದು ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿ ಸ್ಪಂದಿಸಬಹುದು.

**- ಡಾ. ಶಿವಯ್ಯ ಎಸ್,** ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.
s.shivaiah26@gmail.com

### ಏಕೆ ಏರಿಕೆ ?

ನೀರಿಗೂ ಹಣ ತೆತ್ತು
ಕುಡಿಯುತ್ತಿರುವೆವು ಏಕೆ?
ಗಾಳಿಯನ್ನು ದುಡ್ಡು ಕೊಟ್ಟು ಬಳಸುತ್ತಿರುವೆವು ಏಕೆ?
ಅನ್ನವನ್ನೂ ದುಡ್ಡು ಕೊಟ್ಟು ತಿನ್ನುತ್ತಿದ್ದೇವೆ ಏಕೆ?
ಶಿಕ್ಷಣವಂತೂ ದುಡ್ಡಿಲ್ಲದೇ ಪಡೆಯಲಾಗುತ್ತಿಲ್ಲ ಏಕೆ?
ಸರತಿ ಸಾಲಲ್ಲಿ ನಿಲ್ಲದೇ ಏನನ್ನೂ ತರುವುದು ಅಸಾಧ್ಯ ಏಕೆ?
ಸುಲಭವಾಗಿ ದೊರೆಯುವ ವಸ್ತುಗಳ ಬೆಲೆ ಗಗನಕ್ಕೇರಿದೆ ಏಕೆ?
ಸ್ವತಂತ್ರವಾಗಿ ಕಟ್ಟಿದ ಮನೆಗಳು ಸಂಕೀರ್ಣವಾಗುತ್ತಿವೆ ಏಕೆ?
ಕಾಡಿನಲ್ಲಿರಬೇಕಾದ ಪ್ರಾಣಿಗಳು ನಾಡಿಗೆ ಬರುತ್ತಿವೆ ಏಕೆ?
ಕಾರಣ ಹೆಚ್ಚು ಮಕ್ಕಳ ಪಡೆವ ಜನರ ಬಯಕೆ,
ನಮ್ಮ ಸ್ವಾರ್ಥದ ಖುಷಿ ಒಂದಿದ್ದರೆ ಸಾಕೆ?
ಜಗದ ಸ್ಥಿತಿಯ ಅರಿವಿದ್ದೂ ನಮಗೆ ಉಡಾಫೆ ಏಕೆ?
ಭವಿಷ್ಯದಲಿ ಪ್ರತಿಯೊಂದಕ್ಕೂ ಪರದಾಡುವಂತೆ ಆಗುವುದು ಜೋಕೆ,
ತಿಳಿ,ಮನುಜನೆ ಮಿತಿಯಿರಲಿ ನಿನ್ನ ಜೀವನ ನೌಕೆಗೆ.

**- ಉಷಾ ಈ,** ಕನ್ನಡ ಉಪನ್ಯಾಸಕರು
ಎಸ್ ಎ ಜಿ ಬಿ ಸಂಯುಕ್ತ ಪದವಿಪೂರ್ವ ಕಾಲೇಜು, ದಾವಣಗೆರೆ.

# ಗ್ರಾಮಗಳ ಸ್ವಚ್ಛತೆಗೆ ಸಹಕರಿಸಲು ಕರೆ



**ಕಣಿವೆಬಿಳಚಿ ಗ್ರಾಮದ ಕಾರ್ಯಕ್ರಮದಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ**

ದಾವಣಗೆರೆ, ಜು. 10- ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯದ ಕೊರತೆಯಿಂದ ಡೆಂಗ್ಯೂ ಮತ್ತು ಮಲೇರಿಯಾದಂತಹ ಮಾರಣಾಂತಿಕ ಕಾಯಿಲೆಗಳು ಹೆಚ್ಚುತ್ತಿದ್ದು, ರೋಗಗಳನ್ನು ನಿಯಂತ್ರಿಸಲು ಗ್ರಾಮಗಳ ಸ್ವಚ್ಛತೆಗೆ ಪ್ರತಿಯೊಬ್ಬರೂ ಬದ್ಧರಾಗಬೇಕೆಂದು ಶಾಸಕ ಕೆ.ಎಸ್. ಬಸವಂತಪ್ಪ ಸಲಹೆ ನೀಡಿದರು.

ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯ ಕಣಿವೆಬಿಳಚಿ ಗ್ರಾಮದಲ್ಲಿ ಇತ್ತೀಚಿಗೆ ಆಯೋಜಿಸಿದ್ದ ಕಸ ವಿಲೇವಾರಿ ಘಟಕ, ಹೈಟೆಕ್ ಶೌಚಾಲಯ ಮತ್ತು ಅಂಬೇಡ್ಕರ್ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ಕಸ ಮುಕ್ತ ವಾತಾವರಣ ಕಲ್ಪಿಸಲು ಪ್ರತಿ ಗ್ರಾಮಗಳಲ್ಲಿ ಕಸ ವಿಲೇವಾರಿ ಘಟಕಗಳನ್ನು ಸ್ಥಾಪಿಸಿದ್ದು, ಕಸ ಸಂಗ್ರಹಣೆಗಾಗಿ ಮನೆಗಳ ಬಾಗಿಲಿಗೆ ಬರುವ ವಾಹನಕ್ಕೆ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ ಹಾಕಬೇಕು. ಮನೆಗಳ ಸಮೀಪ ಹಾಗೂ ಚರಂಡಿಗಳಿಗೆ ಕಸವನ್ನು ಹಾಕದೇ ಸರ್ಕಾರ ರೂಪಿಸಿರುವ ಸ್ವಚ್ಛತಾ ಯೋಜನೆಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲತಾ ಶ್ರೀನಿವಾಸ್ ಮಾತನಾಡಿ, ಗ್ರಾಮೀಣ ಆರೋಗ್ಯ ರಕ್ಷಣೆಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಗ್ರಾಮಸ್ಥರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಉಪಾಧ್ಯಕ್ಷ ಪರಮೇಶ್ವರಪ್ಪ, ಸದಸ್ಯ ಎಸ್. ಅಣ್ಣೋಜಿರಾವ್, ಪಂಚಾಯತ್‌ರಾಜ್ ಇಲಾಖೆ ಎಂಜಿನಿಯರ್ ಬಸವರಾಜಪ್ಪ, ಪಿಡಿಓ ಮಂಜುನಾಥ್, ಸ್ತ್ರೀಶಕ್ತಿ ಸಂಘದ ಸದಸ್ಯರು, ಗ್ರಾಮಸ್ಥರು ಭಾಗವಹಿಸಿದ್ದರು.

## ಭವಾನಿ ನಿರೀಕ್ಷಣಾ ಜಾಮೀನು ರದ್ಧತಿಗೆ ಸುಪ್ರೀಂ ಕೋರ್ಟ್ ನಕಾರ

**(1ನೇ ಪುಟದಿಂದ)** ಜಾಮೀನು ರದ್ದುಗೊಳಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಭವಾನಿ ರೇವಣ್ಣ ಅವರಿಗೆ ಕರ್ನಾಟಕ ಹೈಕೋರ್ಟ್ ಜಾಮೀನು ನೀಡಿತ್ತು. ಈ ಜಾಮೀನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸುಪ್ರೀಂ ಕೋರ್ಟ್ ನಲ್ಲಿ ಅರ್ಜಿ ಸಲ್ಲಿಸಿತ್ತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರ ಪೀಠ ಈ ಅರ್ಜಿಯ ವಿಚಾರಣೆ ನಡೆಸಿ, ಜಾಮೀನು ತಡೆಯಲು ನಿರಾಕರಿಸಿತು.

## ರಾಣೇಬೆನ್ನೂರು ರೋಟರಿ ಪದಗ್ರಹಣ



ರಾಣೇಬೆನ್ನೂರು,ಜು.10- ಇಲ್ಲಿನ ರೋಟರಿ ಹಾಗೂ ಇನ್ನರ್ ವ್ಹೀಲ್ ಸಂಸ್ಥೆಗಳ 2024-25ನೇ ಸಾಲಿಗೆ ಆಯ್ಕೆಯಾದ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇದೇ ದಿನಾಂಕ 13 ರಂದು ಬೆಳಿಗ್ಗೆ ವರ್ತಕರ ಸಮುದಾಯ ಭವನದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಶಾಸಕ ಪ್ರಕಾಶ ಕೋಳಿವಾಡ ಮತ್ತು ಜಿಲ್ಲಾ ಸಹಾಯಕ ರಾಜ್ಯಪಾಲ ಮಂಜುನಾಥ ಉಪ್ಪಾರ ಆಗಮಿಸುವರು.

ರೋಟರಿ ಪಿಡಿಜಿ ಪ್ರಾಣೇಶ ಜಹಗೀರದಾರ ಅವರು ರೋಟರಿ ಅಧ್ಯಕ್ಷ ವೀರೇಶ ಮೊಟಗಿ, ಕಾರ್ಯದರ್ಶಿ ಪ್ರಕಾಶ ಮಾಳಗಿ ಸಂಗಡಿಗರಿಗೆ ಹಾಗೂ ಇನ್ನರ್ ವ್ಹೀಲ್ ಅಧ್ಯಕ್ಷೆ ಸಂಜನಾ ಕುರುವತ್ತಿ, ಕಾರ್ಯದರ್ಶಿ ಪ್ರಮೀಳಾ ಜಂಬಗಿ ತಂಡದವರಿಗೆ ಪ್ರಮಾಣ ವಚನ ಬೋಧಿಸುವರು.

## ಲಕ್ಷ್ಮೀದೇವಿ ಅಣ್ಣಪ್ಪಗೆ ತೃತೀಯ ಸ್ಥಾನ



**ಹರಪನಹಳ್ಳಿ**

ಹರಪನಹಳ್ಳಿ, ಜು.10- ಕೃಷಿ ವಿಶ್ವವಿದ್ಯಾಲಯದ ರಾಯಚೂರು ಮ್ಯಾನೇಜ್ ಹೈದರಾಬಾದ್ ಸಮಿತಿ (ಉತ್ತರ) ಕೃಷಿ ವಿಶ್ವವಿದ್ಯಾಲಯ ಧಾರವಾಡ, ಕೃಷಿ ಇಲಾಖೆ ವಿಜಯನಗರ ಜಿಲ್ಲೆ, ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ, ಹೂವಿನಹಡಗಲಿ, ಕೃಷಿ ತಂತ್ರಜ್ಞರ ಸಂಸ್ಥೆ ವಿಜಯನಗರ ಜಿಲ್ಲೆ ಇವರ ಸಹಯೋಗದಲ್ಲಿ 'ಕೃಷಿ ಪರಿಕರ ಮಾರಾಟಗಾರರಿಗೆ ಕೃಷಿ ವಿಸ್ತರಣಾ ಸೇವಾ ಡಿಪ್ಲೋಮಾ ಕೋರ್ಸ್' ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಅರಸಿಕೇರಿಯ ವೈ.ಎ ಲಕ್ಷ್ಮೀದೇವಿ ಅಣ್ಣಪ್ಪ ಅವರು ತೃತೀಯ ಸ್ಥಾನ ಪಡೆದು ಪ್ರಮಾಣ ಪತ್ರ ಸ್ವೀಕರಿಸಿದರು

# ವಿಚ್ಛೇದಿತ ಮುಸ್ಲಿಂ ಮಹಿಳೆಯರಿಗೆ ಸಿಆರ್‌ಪಿಸಿ 125ರನ್ವಯ ಜೀವನಾಂಶ

**(1ನೇ ಪುಟದಿಂದ)** ಹಾಗೂ ಪೋಷಕರಿಗೆ ಜೀವನಾಂಶ ನಿರಾಕರಿಸುವಂತಿಲ್ಲ ಎಂದು ಸೆಕ್ಷನ್ 125ರಲ್ಲಿ ತಿಳಿಸಲಾಗಿದೆ. ಸಿ.ಆರ್.ಪಿ.ಸಿ. ಸೆಕ್ಷನ್ 125 ಸೆಕ್ಯುಲರ್ ಹಾಗೂ ಧರ್ಮ ತಟಸ್ಥವಾಗಿದೆ. ಇದಕ್ಕೆ ಮುಸ್ಲಿಂ ಮಹಿಳಾ (ವಿಚ್ಛೇದನದ ಹಕ್ಕುಗಳ ರಕ್ಷಣೆ) ಕಾಯ್ದೆ ಅಡ್ಡಿಯಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜೀವನಾಂಶವು ದಾನವಲ್ಲ, ಇದು ವಿವಾಹಿತ ಮಹಿಳೆಯ ಹಕ್ಕು. ಈ ಹಕ್ಕು ಧರ್ಮದ ಗಡಿಗಳನ್ನು ಮೀರಿದೆ. ಇದು ಲಿಂಗ ಸಮಾನತೆ ಹಾಗೂ ಎಲ್ಲಾ ವಿವಾಹಿತ ಮಹಿಳೆಯರ ಹಣಕಾಸು ಭದ್ರತೆಗೆ ಸಂಬಂಧಿಸಿದ್ದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಗೃಹಿಣಿ ಭಾವನಾತ್ಮಕ ಹಾಗೂ ಇತರೆ ವಿಧಾನಗಳಲ್ಲಿ ಗಂಡನನ್ನು ಅವಲಂಬಿಸಿರುತ್ತಾಳೆ. ಇದು ಕೆಲ ಪತಿಯರಿಗೆ ಗೊತ್ತಿಲ್ಲದೇ ಇರಬಹುದು. ಗೃಹಿಣಿಯರು ಕುಟುಂಬಕ್ಕಾಗಿ ಮಾಡುವ ತ್ಯಾಗ ಹಾಗೂ ಅವರು ವಹಿಸುವ ಪಾತ್ರವನ್ನು ಭಾರತೀಯ ಪುರುಷರು ಅರಿಯುವ ಸಮಯ ಬಂದಿದೆ ಎಂದು ನ್ಯಾಯಾಲಯ ಹೇಳಿದೆ.

ಮೊಹಮದ್ ಅಬ್ದುಲ್ ಸಮದ್ ಎಂಬುವವರು ವಿಚ್ಛೇದಿತ ಪತ್ನಿಗೆ 20 ಸಾವಿರ ರೂ. ಮಾಸಿಕ ಜೀವನಾಂಶ ನೀಡಬೇಕು ಎಂದು ಕೌಟುಂಬಿಕ ನ್ಯಾಯಾಲಯ ತೀರ್ಪು ನೀಡಿತ್ತು. ಸಮದ್ ಅವರು ಇದನ್ನು ಪ್ರಶ್ನಿಸಿ ತೆಲಂಗಾಣ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಹೈಕೋರ್ಟ್ ಜೀವನಾಂಶವನ್ನು 10 ಸಾವಿರ ರೂ.ಗಳಿಗೆ ಇಳಿಸಿತ್ತು. ನಂತರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸಿ.ಆರ್.ಪಿ.ಸಿ.ಯ 125ನೇ ಸೆಕ್ಷನ್ ಪರಿಗಣಿಸುವುದಕ್ಕಿಂತ, ಮುಸ್ಲಿಂ ಮಹಿಳೆ (ವಿಚ್ಛೇದನದ ಹಕ್ಕುಗಳ ರಕ್ಷಣೆ) ಕಾಯ್ದೆ, 1986 ಪರಿಗಣಿಸಬೇಕು ಎಂದು ಅರ್ಜಿದಾರರು ವಾದಿಸಿದ್ದರು. ಮುಸ್ಲಿಂ ಮಹಿಳೆ (ವಿಚ್ಛೇದನದ ಹಕ್ಕುಗಳ ರಕ್ಷಣೆ) ಕಾಯ್ದೆ, 1986 ವಿಶೇಷ ಕಾಯ್ದೆಯಾಗಿದೆ. ಇದು ಸಾಮಾನ್ಯ ಕಾಯ್ದೆಯನ್ನು ಮೀರುತ್ತದೆ ಎಂದು ಅರ್ಜಿದಾರರು ವಾದಿಸಿದ್ದರು.

ಮುಸ್ಲಿಂ ಮಹಿಳೆಯರಿಗೆ ಸಿ.ಆರ್.ಪಿ.ಸಿ.ಯ 125ನೇ ಸೆಕ್ಷನ್‌ಗಿಂತ ಮುಸ್ಲಿಂ ಮಹಿಳೆ (ವಿಚ್ಛೇದನದ ಹಕ್ಕುಗಳ ರಕ್ಷಣೆ) ಕಾಯ್ದೆ, 1986 ಹೆಚ್ಚು ಉಪಯುಕ್ತವಾಗಿದೆ ಎಂದು ಸಮದ್ ಪರ ಹಿರಿಯ ವಕೀಲ ವಸೀಮ್ ಖಾದ್ರಿ ವಾದಿಸಿದ್ದರು. ಆದರೆ, ಸಿ.ಆರ್.ಪಿ.ಸಿ. ಲಿಂಗ ತಟಸ್ಥವಾಗಿದೆ. ಈ ಮೂಲಕ ಮಹಿಳೆಯರು ಪರಿಹಾರ ಪಡೆಯಲು ಹಕ್ಕು ಹೊಂದಿದ್ದಾರೆ. ಈ ಹಕ್ಕು ಕಸಿಯಲಾಗದು ಎಂದು ಅಮಿಕಸ್ ಕ್ಯೂರಿ ಗೌರವ್ ಅಗರ್‌ವಾಲ್ ಹೇಳಿದ್ದರು.

### ಮುಸ್ಲಿಂ ಮಹಿಳೆಯರ ಜೀವನಾಂಶ ತಡೆದಿದ್ದ 1986ರ ಕಾಯ್ದೆ

1985ರಲ್ಲಿ ಷಾ ಬಾನೋ ಪ್ರಕರಣದಲ್ಲಿ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಧರ್ಮ ಭೇದವಿಲ್ಲದೇ ಸಿ.ಆರ್.ಪಿ.ಸಿ.ಯ 125ನೇ ಸೆಕ್ಷನ್ ಎಲ್ಲರಿಗೂ ಅನ್ವಯವಾಗುತ್ತದೆ ಎಂದು ತಿಳಿಸಿತ್ತು. ಆ ಮೂಲಕ ವಿಚ್ಛೇದಿತ ಮುಸ್ಲಿಂ ಮಹಿಳೆಯರು ಜೀವನಾಂಶ ಪಡೆಯಲು ಅರ್ಹರಾಗಿದ್ದರು. ಆದರೆ, ಆಗಿನ ರಾಜೀವ್ ಗಾಂಧಿ ಸರ್ಕಾರ ಮುಸ್ಲಿಂ ಮಹಿಳೆ (ವಿಚ್ಛೇದನದ ಹಕ್ಕುಗಳ ರಕ್ಷಣೆ) ಕಾಯ್ದೆ, 1986 ಜಾರಿಗೆ ತಂದಿತ್ತು. ಮುಸ್ಲಿಂ ಮಹಿಳೆಯರು ವಿಚ್ಛೇದನದ ನಂತರ 90 ದಿನಗಳ ಕಾಲ ಮಾತ್ರ ಜೀವನಾಂಶ ಪಡೆಯಲು ಅರ್ಹರು ಎಂದು ಈ ಕಾಯ್ದೆಯಡಿ ತಿಳಿಸಲಾಗಿತ್ತು.

2001ರಲ್ಲಿ ಸುಪ್ರೀಂ ಕೋರ್ಟ್ 1986ರ ಕಾಯ್ದೆಯ ಸಿಂಧುತ್ವ ಎತ್ತಿ ಹಿಡಿದಿತ್ತು. ಆದರೆ, ವಿಚ್ಛೇದಿತ ಮುಸ್ಲಿಂ ಮಹಿಳೆ ಪುನರ್‌ವಿವಾಹವಾಗುವವರೆಗೆ ಇಲ್ಲವೇ ಸ್ವಾವಲಂಬಿಯಾಗುವವರೆಗೆ ಜೀವನಾಂಶ ನೀಡಬೇಕು ಎಂದು ತಿಳಿಸಿತ್ತು. ಈಗ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದಾಗಿ, ಮಹಿಳೆಯ ಧರ್ಮ ಯಾವುದೇ ಇದ್ದರೂ, ಜೀವನಾಂಶ ಪಡೆಯುವ ಹಕ್ಕು ನೆಲೆಗೊಳಿಸಿದಂತಾಗಿದೆ.

## ವಿಚ್ಛೇದಿತ ಮುಸ್ಲಿಂ ಮಹಿಳೆಗೆ 2 ಕಾಯ್ದೆ

**(1ನೇ ಪುಟದಿಂದ)** ಸಂಬಂಧಿಸಿದಂತೆ ಸಿ.ಆರ್.ಪಿ.ಸಿ.ಯ ಸೆಕ್ಷನ್ 125 ರೂಪಿಸಲಾಗಿದೆ. ಮುಸ್ಲಿಂ ಮಹಿಳೆಯರಿಗಾಗಿ 1986ರಲ್ಲಿ ವಿಶೇಷವಾದ ವಿಚ್ಛೇದನ ಹಕ್ಕುಗಳ ರಕ್ಷಣಾ ಕಾಯ್ದೆ ರೂಪಿಸಲಾಗಿದೆ.

ಮುಸ್ಲಿಂ ಮಹಿಳೆಯರು ಮದುವೆಯಾಗಿದ್ದರೆ ಹಾಗೂ ಮುಸ್ಲಿಂ ಕಾಯ್ದೆಯ ಅನ್ವಯ ವಿಚ್ಛೇದಿತರಾಗಿದ್ದರೆ ಅವರಿಗೆ ಸಿ.ಆರ್.ಪಿ.ಸಿ. ಸೆಕ್ಷನ್ 125 ಹಾಗೂ 1986ರ ಕಾಯ್ದೆಗಳ ಎರಡು ಅನ್ವಯವಾಗುತ್ತದೆ ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ವಿಚ್ಛೇದಿತ ಮುಸ್ಲಿಂ ಮಹಿಳೆ ಈ ಎರಡು ಆಯ್ಕೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಇಲ್ಲವೇ ಎರಡನ್ನೂ ಆಯ್ಕೆ ಮಾಡಿಕೊಳ್ಳಬಹುದು. ಏಕೆಂದರೆ 1986ರ ಕಾಯ್ದೆಯು ಸಿ.ಆರ್.ಪಿ.ಸಿ.ಯ ಸೆಕ್ಷನ್ 125ರ ವಿರುದ್ಧವಿಲ್ಲ, ಅದರ ಜೊತೆಯಾಗಿದೆ ಎಂದು ನ್ಯಾಯಾಲಯ ತೀರ್ಪಿನಲ್ಲಿ ತಿಳಿಸಿದೆ.

## ಶಾ ಬಾನೋ ಪ್ರಕರಣ ನೆನಪಿಸಿದ ತೀರ್ಪು

**(1ನೇ ಪುಟದಿಂದ)** ನಂತರವೂ ಜೀವನಾಂಶ ಪಡೆಯಲು ಸಾಧ್ಯವೇ ಎಂಬ ಚರ್ಚೆಯನ್ನು ಈ ತೀರ್ಪು ಹುಟ್ಟು ಹಾಕಿತ್ತು. ಈ ತೀರ್ಪಿನಿಂದ ದೇಶಾದ್ಯಂತ ಕೋಲಹಲ ಉಂಟಾಗಿತ್ತು. ಆಗಿನ ರಾಜೀವ್ ಗಾಂಧಿ ಸರ್ಕಾರ ಆಗಿನ ಕೇಂದ್ರ ಸಚಿವ ಆರಿಫ್ ಮೊಹಮ್ಮದ್ ಖಾನ್ ಅವರು ತೀರ್ಪನ್ನು ಸಂಸತ್ತಿನಲ್ಲಿ ಸಮರ್ಥಿಸಿಕೊಳ್ಳಬೇಕು ಎಂದು ತಿಳಿಸಿತ್ತು. ಆದರೆ ಮುಸ್ಲಿಂ ವಿದ್ವಾಂಸರು ಹಾಗೂ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಸುಪ್ರೀಂ ಕೋರ್ಟ್ ತೀರ್ಪನ್ನು ಪ್ರಬಲವಾಗಿ ವಿರೋಧಿಸಿತ್ತು.

ನಂತರದಲ್ಲಿ ರಾಜೀವ್ ಗಾಂಧಿ ಸರ್ಕಾರ ತನ್ನ ನಿಲುವನ್ನು ಬದಲಿಸಿ, ಸಚಿವ ಝಡ್.ಎ. ಅನ್ಸಾರಿ ಅವರು ಸುಪ್ರೀಂ ಕೋರ್ಟ್ ತೀರ್ಪು ವಿರೋಧಿಸಬೇಕು ಎಂದು ತಿಳಿಸಿತ್ತು. . ಇದರಿಂದ ಬೇಸರಗೊಂಡ ಖಾನ್ ಸರ್ಕಾರ ತೊರೆದಿದ್ದರು. ಅವರು ಈಗ ಕೇರಳದ ರಾಜ್ಯಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ನಂತರ ರಾಜೀವ್ ಗಾಂಧಿ ಸರ್ಕಾರ ಮುಸ್ಲಿಂ ಮಹಿಳೆಯರ ವಿಚ್ಛೇದನ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಕಾಯ್ದೆ ಜಾರಿಗೆ ತಂದಿತ್ತು. ಈ ಕಾಯ್ದೆಯ ಮೂಲಕ ಮುಸ್ಲಿಂ ಮಹಿಳೆಯರು ಎಷ್ಟು ಅವಧಿಗೆ ಜೀವನಾಂಶ ಪಡೆಯಬಹುದು ಎಂಬುದನ್ನು ತಿಳಿಸಲಾಗಿತ್ತು. 2001ರಲ್ಲಿ ಸುಪ್ರೀಂ ಕೋರ್ಟ್ 1986ರ ಕಾಯ್ದೆಯ ಸಂವಿಧಾನಿಕ ಸಿಂಧುತ್ವವನ್ನು ಎತ್ತಿ ಹಿಡಿದಿತ್ತು.

ವಿಚ್ಛೇದಿತ ಮಹಿಳೆಯಾಗಿದ್ದ ಶಾ ಬಾನೋ ಅವರು ಜೀವನಾಂಶಕ್ಕಾಗಿ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿದ್ದರು. ನಂತರ ಪ್ರಕರಣ ಸುಪ್ರೀಂ ಕೋರ್ಟ್‌ವರೆಗೆ ತಲುಪಿತ್ತು. 1985ರಲ್ಲಿ ಐವರು ಸದಸ್ಯರ ಸಂವಿಧಾನಿಕ ಪೀಠ ಸರ್ವ ಸಮ್ಮತಿಯೊಂದಿಗೆ ಐತಿಹಾಸಿಕ ತೀರ್ಪು ನೀಡಿತ್ತು.

ಇದೀಗ ಬುಧವಾರ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಹಾಗೂ ಆಗಸ್ಟೈನ್ ಜಾರ್ಜ್ ಮಸೀಹ್ ಅವರನ್ನು ಒಳಗೊಂಡ ಪೀಠ ಸಹ ಶಾ ಬಾನೋ ಪ್ರಕರಣದ ತೀರ್ಪನ್ನು ಉಲ್ಲೇಖಿಸಿದೆ.

ವೈಯಕ್ತಿಕ ಕಾನೂನು ಅಂಶಗಳು ಹಾಗೂ ಸೆಕ್ಯುಲರ್ ಕಾನೂನಿನ ಅಂಶಗಳ ನಡುವೆ ಸಂಘರ್ಷ ಆದಾಗ, ಸೆಕ್ಯುಲರ್ ಕಾನೂನಾದ ಸಿ.ಆರ್.ಪಿ.ಎಫ್. ಸೆಕ್ಷನ್ 125 ಅನ್ವಯವಾಗುತ್ತದೆ ಎಂದು ಪೀಠ ತಿಳಿಸಿದೆ. ಗಂಡ ಇನ್ನೊಂದು ಮದುವೆಯಾದಾಗ ಆತನ ಜೊತೆಗೆ ಬದುಕಲು ನಿರಾಕರಿಸುವ ಹಕ್ಕನ್ನು 1985ರ ತೀರ್ಪಿನಲ್ಲಿ ವಿವರಿಸಲಾಗಿದೆ ಎಂದು ಪೀಠ ಹೇಳಿದೆ.

# ದೆಹಲಿ ಹೆದ್ದಾರಿ ಬ್ಯಾರಿಕೇಡ್ ತೆರವಿಗೆ ಹೈಕೋರ್ಟ್ ಆದೇಶ

**(1ನೇ ಪುಟದಿಂದ)** ತೆರಳುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜದೂರ್ ಮೋರ್ಚಾಗಳು ತಿಳಿಸಿದ್ದವು. ಪಂಜಾಬ್ ಮತ್ತು ಹರಿಯಾಣ ಗಡಿಯನ್ನು ಬಂದ್ ಮಾಡಿರುವುದನ್ನು ಪ್ರಶ್ನಿಸಿ. ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಈ ಬಗ್ಗೆ ನಿರ್ದೇಶನ ನೀಡಿರುವ ಹೈಕೋರ್ಟ್, ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಎದುರಾದಲ್ಲಿ ಕಾನೂನಿನ ಅನ್ವಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಿಳಿಸಿದೆ.

## ಹಾಲಿನ ಟ್ಯಾಂಕರ್‌ಗೆ ಸ್ಲೀಪರ್ ಬಸ್ ಡಿಕ್ಕಿ : 18 ಸಾವು

ಉನ್ನಾವೋ, ಜು. 10 - ದೆಹಲಿಗೆ ತೆರಳುತ್ತಿದ್ದ ಡಬಲ್ ಡೆಕ್ಕರ್ ಸ್ಲೀಪರ್ ಬಸ್ ಒಂದು ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದು 18 ಜನ ಸಾವನ್ನಪ್ಪಿದ್ದಾರೆ ಹಾಗೂ 19 ಜನ ಗಾಯಗೊಂಡಿದ್ದಾರೆ. ಬೆಳಗ್ಗೆ 5 ಗಂಟೆ ಸಮಯದಲ್ಲಿ ಉತ್ತರ ಪ್ರದೇಶದ ಜೋಜಿಕೋಟ್ ಎಂಬ ಹಳ್ಳಿಯ ಬಳಿಯಲ್ಲಿ ಆಗ್ರಾ - ಲಖ್ನೌ ಹೆದ್ದಾರಿಯಲ್ಲಿ ಈ ಅಪಘಾತ ನಡೆದಿದೆ. ಬಿಹಾರದ ಮೋತಿಹಾರದಿಂದ ಬಸ್ ಬರುತ್ತಿತ್ತು. ವೇಗವಾಗಿ ಬರುತ್ತಿದ್ದ ಬಸ್ ಹಾಲಿನ ಟ್ಯಾಂಕರ್‌ಗೆ ಹಿಂದಿನಿಂದ ಗುದ್ದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 20 ಪ್ರಯಾಣಿಕರಿಗೆ ಸಣ್ಣ ಗಾಯಗಳಾಗಿವೆ ಅವರನ್ನು ಇನ್ನೊಂದು ಬಸ್‌ನಲ್ಲಿ ದೆಹಲಿಗೆ ಕಳಿಸಲಾಗಿದೆ. ಅಪಘಾತ ಸಂಭವಿಸಿದಾಗ ಬಸ್‌ನಲ್ಲಿ 60 ಜನ ಇದ್ದರು.


**COMMERCIAL SITE P.J. Ext ನಲ್ಲಿ ಮಾರಾಟಕ್ಕೆ**
15x40 Commercial Building
570 Ft Commercial RVS Circle
700 Ft Commercial Mahalaxmi Layout
1080 Sqft BT Layout (Commercial)
50x80 J.H. Patel Badavane
76768 57676 Veeresh

**ಸೈಟುಗಳು ಮಾರಾಟಕ್ಕಿವೆ**
ಹರಿಹರದ ಅಮರಾವತಿ ಹೌಸಿಂಗ್ ಕಾಲೋನಿ ಮತ್ತು ಕೆ.ಹೆಚ್.ಬಿ. ಪಕ್ಕದಲ್ಲಿ ಅಳತೆ 30x40 ಪೂ-ಪ ದಿಕ್ಕಿನ 4 ಸೈಟುಗಳು ದೂಡಾ ಅಂತಿಮ ಅನುಮೋದನೆ. ನಗರ ಸಭೆ ಡೋ. ನಂ. ಬ್ಯಾಂಕ್ ಸಾಲ ಸೌಲಭ್ಯವಿರುವ ನೇರ ಮಾಲೀಕರಿಂದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
98809 33630

**Property Hub**
ಕರ್ನಾಟಕದ ಎಲ್ಲ ಜಿಲ್ಲೆ, ತಾಲ್ಲೂಕ್ ಮತ್ತು ಹಳ್ಳಿಗಳ EC / ಇಸಿ ಮತ್ತು Certified copy / ದೃಢೀಕೃತ ಪ್ರತಿಗಾಗಿ ನಮ್ಮನ್ನು ಸಂಪರ್ಕಿಸಿ
96118 66449

**ಬೇಕಾಗಿದ್ದಾರೆ**
ಪಿಯುಸಿ ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6.30ರ ನಂತರ
**ಶ್ರೀ ಗುರು ಎಂಟರ್‌ಪ್ರೈಸಸ್**
#579, 6ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಲೇಡಿಸ್ ಟೆಲಿ ಮಾರ್ಕೆಟಿಂಗ್ ಸಂಬಳ-9000/- ಬಾಯ್ಸ್‌ಗೆ ಫೀಲ್ಡ್ ವರ್ಕ್ 14000/- ಎಂಸಿಸಿ 'ಬಿ' ಬ್ಲಾಕ್, 5ನೇ ಮೇನ್, 5ನೇ ಕ್ರಾಸ್, ದಾವಣಗೆರೆ.
95917 50723, 78999 51681

**ಡ್ರೈವರ್ ಬೇಕಾಗಿದ್ದಾರೆ**
6 ವ್ಹೀಲ್ Eisher ಲಾರಿಗೆ ದಾವಣಗೆರೆ, ಬೆಂಗಳೂರು, ಮಂಗಳೂರಿಗೆ ಟ್ರಿಪ್ ಓಡಿಸಲು ಡ್ರೈವರ್ ಬೇಕಾಗಿದ್ದಾರೆ.
73530 39444

**ಹುಡುಗರು ಬೇಕಾಗಿದ್ದಾರೆ**
20 ವರ್ಷ ಮೇಲ್ಪಟ್ಟ ಯುವಕರು, ಯಾವುದೇ ವಿದ್ಯಾರ್ಹತೆ ಅಗತ್ಯವಿಲ್ಲ, ತಿಂಗಳ ಸಂಬಳ ಅಥವಾ ಕಮೀಷನ್ ಆಧಾರದ ಮೇಲೆ ಕೆಲಸ ಮಾಡಬಹುದು. ಕೆಲಸಗಾರರನ್ನು ಸರಬರಾಜು ಮಾಡುವ ಗುತ್ತಿಗೆದಾರರು ಸಂಪರ್ಕಿಸಬಹುದು.
**ಭೂಮಾತಾ ರೈತ ಉತ್ಪಾದಕರ ಕಂಪನಿ, ಲಿ.,** ನಾಗನೂರು, ದಾವಣಗೆರೆ ಜಿಲ್ಲೆ.
63621 21181, 996431 2394 98441 94874

**ಬೇಕಾಗಿದ್ದಾರೆ**
ಲಾಡ್ಜ್ ನಲ್ಲಿ ಕೆಲಸ ನಿರ್ವಹಿಸಲು
1) supervisor
2) Receptionist/ Manager
(Computer knowledge must)
Contact in person with biodata.
81528 82277

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬಾಡಿಗೆಗೆ ಇದೆ**
1200Sqft ಅಳತೆಯುಳ್ಳ ಸುಸಜ್ಜಿತ ಸೌಲಭ್ಯವುಳ್ಳ ಮಳಿಗೆ, ಬ್ಯಾಂಕ್ ಅಥವಾ ಆಫೀಸ್ ಅನುಕೂಲಕ್ಕೆ ತಕ್ಕಂತೆ ಎಲ್ಲಾ ವ್ಯವಸ್ಥೆ ಇದ್ದು, ಮುಖ್ಯ ರಸ್ತೆಗೆ ಹೊಂದಿಕೊಂಡಿರುತ್ತದೆ. ATMಗೆ ಪ್ರತ್ಯೇಕ ಮಳಿಗೆ ವ್ಯವಸ್ಥೆ ಇದೆ. ಸಂಪರ್ಕಿಸಿ : ಸ್ಥಳ ನಾಗನೂರು.
9343464645, 9964312394

**ಅಂಗಡಿ ಬಾಡಿಗೆಗಿದೆ**
ಕೆಎಸ್‌ಎಸ್ ಕಾಂಪ್ಲೆಕ್ಸ್, 403/5 ಶಾಪ್ 1, ಎಸ್‌ಎಸ್ ಹೈಟೆಕ್ ಆಸ್ಪತ್ರೆ, ಮೇನ್ ರೋಡ್, ಮಂಜುನಾಥೇಶ್ವರ ಬೆಣ್ಣೆ ದೋಸೆ ಹೋಟೆಲ್ ಪಕ್ಕ, ಜಯನಗರ "ಎ" ಬ್ಲಾಕ್, ದಾವಣಗೆರೆ-4.
72045 42910

**ಬೇಕಾಗಿದ್ದಾರೆ**
ವಾಹನ ಚಾಲಕರು ಆಕರ್ಷಕ ಸಂಬಳದೊಂದಿಗೆ, ESI & PF ಸೌಲಭ್ಯವಿದೆ.
**ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ,** ನಿಟ್ಟುವಳ್ಳಿ - ದಾವಣಗೆರೆ.
9844433059, 8660576847

**ಸೆಮಿ ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರಸ್ತೆಗೆ ಹತ್ತಿರದಲ್ಲಿ, ಕೈಗಾರಿಕೆಗಳು, ಗ್ಯಾರೇಜ್, ವರ್ಕ್ ಶಾಪ್ ಅಥವಾ ಮಳಿಗೆಗಳನ್ನು ಮಾಡಬಹುದಾದ 40x68 ರ ಜೋಡಿ ಸೈಟು, 40x70, ಹಾಗೂ 25x88 ಅಳತೆಯ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
**ಮೋಹನ್ ರಿಯಲ್ ಎಸ್ಟೇಟ್ ಏಜೆನ್ಸೀಸ್**
97424 34049

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್‌ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ ಕೊಡಲಾಗುವುದು.
81056 99985
89715 04492
99004 67508

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಕ್ ಗೇಟ್ ಹತ್ತಿರ, ಅಮರಾವತಿ ರಸ್ತೆ, 6ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ.
(1550/- ಚದುರ ಅಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ.
98452 36274

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ (ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ) ಹಿಂದಿ ಬಿ.ಎ., ಬಿ.ಇಡಿ. ತರಬೇತಿ ಹೊಂದಿದ ಶಿಕ್ಷಕರು ಬೇಕಾಗಿದ್ದಾರೆ.
99640 17729

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**COMMERCIAL SPACE FOR RENT**
1st floor, 2600 sqft, Main Road facing, suitable for Financial Institutions/Bank (Strong room available) Hadadi Main Road, Near Vidyarthi Bhavan Circle, DVG.
98440 15712
90604 04567

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
7ನೇ ಲಕ್ಕಿ ಡ್ರಾ ವಿನ್ನರ್
956
ಸಂಗೀತ
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
**ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್**
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ 8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಸೈಟು ಮಾರಾಟಕ್ಕೆ ಇದೆ**
ಶಿವಮೊಗ್ಗ ಜಿಲ್ಲಾ ಆಯನೂರು ನಿಂದ 3 Km ಮುಂದೆ ರಿಪೇನ್ ಪೇಟೆ, ಮೇನ್ ರೋಡ್ ಪಕ್ಕ, 5000 ಅಡಿ ಜಾಗ ಮಾರಾಟಕ್ಕೆ ಇದೆ.
63642 27321

**ಬೇಕಾಗಿದ್ದಾರೆ**
Comercial Vehicle Driver ಬೇಕಾಗಿದ್ದಾರೆ. ವಿಚಾರಿಸಿ. ಮೊಬೈಲ್ ನಂ.
76250 32196

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಕೆ. ಜಿ. ಪಿ. ಬಂಗಾರದ ಅಂಗಡಿಯಲ್ಲಿ ಸೇಲ್ಸ್ ಬಾಯ್ಸ್, ಸೇಲ್ಸ್ ಗರ್ಲ್ಸ್, ಆಫೀಸ್ ರೆಸಿಪಿಯೇಷನ್ಸ್ ಬೇಕಾಗಿದ್ದಾರೆ. ವೇತನ 15 ಸಾವಿರದಿಂದ 25 ಸಾವಿರ. ಮೊದಲು ಬಂದವರಿಗೆ ಆದ್ಯತೆ
90191 69123

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**TUITIONS**
IGCSE, ICSE, CBSE and State Board from Class 5th to 12th MCC `A' Block
98444 92888

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಜನ್ಮಾಂತರ ಆತ್ಮ ಚಿಕಿತ್ಸೆ**
ಬಿಪಿ, ಶುಗರ್, ಮೈಗ್ರೇನ್, ಕ್ಯಾನ್ಸರ್, ಸ್ಟ್ರೋಕ್, ಡಿಪ್ರೆಶನ್, ಸ್ಕಿಜೋಫ್ರೇನಿಯಾ, ಮಾಟ, ಮಂತ್ರ, ಭೂತ ಪ್ರೇತಗಳ ಭಯ ಮುಂತಾದ ಅನೇಕ ಸಮಸ್ಯೆಗಳ ಮೂಲ ಹಿಂದಿನ ಜನ್ಮಗಳ ದೋಷಗಳಿಗೆ ರಾಮಬಾಣ ಚಿಕಿತ್ಸೆ
8073342011
(ವ್ಯಕ್ತಿ ಎಷ್ಟೇ ದೂರವಿದ್ದರೂ distance heeling ಮಾಡುತ್ತೇವೆ)

**ನಿಮಗೆ ಮಂಡಿನೋವು ಇದೆಯೇ? ಇಲ್ಲಿದೆ ಸಹಜ ಪರಿಹಾರ**
ಸಂಪರ್ಕಿಸಿ
ಪುನರ್‌ಚೇತನ ಹೆಲ್ತ್ ಕೇರ್
7ನೇ ಕ್ರಾಸ್, 8ನೇ ಮೇನ್, ಪಿ.ಜೆ.ಬಡಾವಣೆ, ದಾವಣಗೆರೆ.
ಮೊ : 99169 33905

**WANTED**
Shop Incharge Male candidate only with Accounts knowledge ( GST). Contact :
**Sri Vinayaka enterprise**
Jayanagara, `B' Block, Davangere.
84313 37172

**3BHK HOUSE FOR RENT**
At Uttam Badavane, 1st main, B ward No - 30, Avaragere Road. Contact :
99015 64535
94498 04535

**ಪ್ರವೇಶ ಪ್ರಕಟಣೆ**
**ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ**
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
**ಮಾನಸ ಕಮ್ಯೂನಿಟಿ ಕಾಲೇಜ್ (ರಿ)**
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಶಿಕ್ಷಕಿಯರು ಬೇಕಾಗಿದ್ದಾರೆ**
ಮಲೇಬೆನ್ನೂರು ಪಟ್ಟಣದ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ವಿದ್ಯಾ ಸಂಸ್ಥೆಯಲ್ಲಿ ಶಿಕ್ಷಕಿಯರು ಬೇಕಾಗಿದ್ದಾರೆ.
ಬಿ.ಎಸ್ಸಿ., ಬಿಇಡಿ., - 2 ಹುದ್ದೆ,
ಬಿ.ಎ., ಬಿ.ಇಡಿ., - 2 ಹುದ್ದೆ. ಆಸಕ್ತ ಅಭ್ಯರ್ಥಿಗಳು ದಿನಾಂಕ 15.7.2024ರೊಳಗೆ ಅರ್ಜಿ ಸಲ್ಲಿಸಿ.
95387 17935

# ಜನರ ವಿಶ್ವಾಸ ಸ್ಮರಿಸಿದ ವೆಂಕಟೇಶ್ ಸಹಕಾರ ಬಯಸಿದ ಗಂಗಾಧರ ಸ್ವಾಮಿ



**ನಿಕಟಪೂರ್ವ ಜಿಲ್ಲಾಧಿಕಾರಿಗೆ ಬೀಳ್ಕೊಡುಗೆ, ನೂತನ ಜಿಲ್ಲಾಧಿಕಾರಿಗೆ ಸ್ವಾಗತ**

ದಾವಣಗೆರೆ, ಜು. 10 - ಕಳೆದೊಂದು ವರ್ಷದಿಂದ ಜಿಲ್ಲಾಧಿಕಾರಿಯಾಗಿ ಕೆಲಸ ಮಾಡಿದ್ದ ಎಂ.ವಿ. ವೆಂಕಟೇಶ್ ಅವರಿಗೆ ಬೀಳ್ಕೊಡುಗೆ ಮತ್ತು ನೂತನವಾಗಿ ಜಿಲ್ಲಾಧಿಕಾರಿಯಾಗಿ ಆಗಮಿಸಿರುವ ಜಿ. ಎಂ. ಗಂಗಾಧರಸ್ವಾಮಿ ಅವರಿಗೆ ಸ್ವಾಗತ ಕೋರುವ ಕಾರ್ಯಕ್ರಮವನ್ನು ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ನೆರವೇರಿಸಲಾಯಿತು. ವಿವಿಧ ಇಲಾಖೆ, ಸಂಘ -ಸಂಸ್ಥೆಗಳ ಸಹಯೋಗ ದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಮಾತನಾಡಿದ ನಿಕಟ ಪೂರ್ವ ಜಿಲ್ಲಾಧಿಕಾರಿ ಎಂ. ವಿ. ವೆಂಕಟೇಶ್ ಅವರು, ಅಧಿಕಾರಿಗ ಳೊಂದಿಗೆ ತಂಡದ ರೀತಿಯಲ್ಲಿ ಕೆಲಸ ಮಾಡಿದ್ದರಿಂದ ಅನೇಕ ವರ್ಷಗಳಿಂದ ಬಗೆಹರಿಯದೇ ಇದ್ದ ಮತ್ತು ಜಟಿಲವಾದ ಸಮಸ್ಯೆಗಳನ್ನು ಇತ್ಯರ್ಥ ಮಾಡಲಾಯಿತು. ಇದಕ್ಕೆ ಬೇಕಾದ ಎಲ್ಲಾ ಸಹಕಾರ ಜನಪ್ರತಿನಿಧಿಗಳಿಂದ ಸಿಕ್ಕಿದ್ದರಿಂದ ಅಲ್ಪ ಅವಧಿಯಲ್ಲಿ ಗುರುತರವಾದ ಕೆಲಸ ಮಾಡಲು ಸಾಧ್ಯವಾಗಿತು ಎಂದರು.

ಜಿಲ್ಲಾಧಿಕಾರಿಯಾಗಿ ಕೆಲಸ ಮಾಡುವಾಗ ಜನಪ್ರತಿನಿಧಿಗಳು, ಅಧಿಕಾರಿಗಳು, ಸಾರ್ವಜನಿಕರು, ರೈತರು, ಸಂಘ, ಸಂಸ್ಥೆಯವರ ವಿಶ್ವಾಸ ಪಡೆದಾಗ ನಾವು ಮಾಡುವ ಕೆಲಸ ಸಂಪೂರ್ಣವಾಗಿ ಯಶಸ್ವಿಯಾಗಲು ಸಾಧ್ಯ ಎಂದರು.

ಜಿಲ್ಲೆಯಲ್ಲಿ ಕೈಗೊಂಡ ಜನಸ್ಪಂದನ ಕಾರ್ಯಕ್ರಮದಲ್ಲಿ ಅನೇಕ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಇತ್ಯರ್ಥ ಮಾಡಿ ಜನಮಾನಸದಲ್ಲಿ ಉಳಿಯುವಂತೆ ಮಾಡಲಾಗಿದೆ ಎಂದರು.

ಎಲ್ಲಾ ಇಲಾಖೆ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದ್ದರಿಂದ ದಾವಣಗೆರೆ ಜಿಲ್ಲೆ ಹಲವು ವಿಷಯಗಳಲ್ಲಿ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದೆ. ಲ್ಯಾಂಡ್‌ಬೀಟ್, ಪಹಣಿಗೆ ಆಧಾರ್ ಜೋಡಣೆ ಸೇರಿದಂತೆ ರಾಜ್ಯದಲ್ಲಿ ಗುರುತಿಸಿಕೊಂಡ ಜಿಲ್ಲೆಯಾಗಿದೆ ಎಂದರು.

ನೂತನ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಎಲ್ಲರ ಸಹಕಾರ, ಎಲ್ಲರೊಟ್ಟಿಗೆ ಸೇರಿ ಜಿಲ್ಲೆಯ ಅಭಿವೃದ್ದಿ ಮಾಡೋಣ. ಬಂದ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿಯೇ ಅಧಿಕಾರಿ ವರ್ಗ ಇರುವುದು. ನಾವೆಲ್ಲರೂ ತಂಡವಾಗಿ ಕೆಲಸ ಮಾಡೋಣ ಎಂದರು.

ಅನೇಕ ಹಿಂದಿನ ಜಿಲ್ಲಾಧಿಕಾರಿಗಳ ತಮ್ಮ ಸೇವಾ ಅವಧಿಯಲ್ಲಿ ಮಾಡಿದ ಕೆಲಸಗಳು, ಆಡಳಿತಾತ್ಮಕ ಅನುಭವಗಳ ಸಂಗ್ರಹವನ್ನು ಪುಸ್ತಕದ ರೂಪದಲ್ಲಿ ತಂದಿದ್ದಾರೆ. ಅಂತಹ ಪುಸ್ತಕಗಳನ್ನು ಓದುವ ಮೂಲಕ ಜನರ ಸೇವೆಯನ್ನು ಯಾವ ರೀತಿ ಹೊಸ ಉದ್ದೇಶದಿಂದ ಕೆಲಸ ಮಾಡಬಹುದೆಂದು ಎಲ್ಲರ ಒಗ್ಗಟ್ಟಿನಿಂದ ಕೆಲಸ ಮಾಡೋಣ ಎಂದರು. ಆಡಳಿತಾತ್ಮಕ ವಿಷಯಗಳಲ್ಲಿ ಕಠಿಣತೆಯು ಇರುತ್ತದೆ, ಕೆಲಸ ಮಾಡಿ ದವರ ಮೇಲೆ ಸರಳತೆಯು ಇರುತ್ತದೆ ಎಂದು ಮಾರ್ಮಿಕವಾಗಿ ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಿಲ್ಲಾ ರಕ್ಷಣಾಧಿಕಾರಿ ಉಮಾ ಪ್ರಶಾಂತ್, ನ್ಯಾಯಮೂರ್ತಿ ಸುಭಾಷ್ ಬಿ.ಆಡಿ, ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ಪಾಲಿಕೆ ಆಯುಕ್ತರಾದ ರೇಣುಕಾ, ಉಪವಿಭಾಗಾಧಿಕಾರಿ ದುರ್ಗಶ್ರೀ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಜೀವನವೆಂಬ ಖಾಲಿ ಕ್ಯಾನವಾಸ್ ಮಾಸ್ಟರ್ ಪೀಸ್ ಮಾಡಬೇಕಾದರೆ ಜ್ಞಾನ ಮುಖ್ಯ : ಡಾ. ಪ್ರಭಾ



ದಾವಣಗೆರೆ, ಜು. 10- ಖಾಲಿ ಕ್ಯಾನವಾಸ್ ರೀತಿ ಇರುವ ನಮ್ಮ ಜೀವನವನ್ನು ಉತ್ತಮ ಆಯ್ಕೆಗಳೆಂಬ ಬಣ್ಣಗಳ ಮೂಲಕ 'ಮಾಸ್ಟರ್ ಪೀಸ್' ನಂತೆ ಮಾಡಲು ಉತ್ತಮ ಜ್ಞಾನ, ಕೌಶಲ್ಯ, ನಾಯಕತ್ವದ ಗುಣ ಅಗತ್ಯ ಎಂದು ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ 2023-24ನೇ ಸಾಲಿನ ಪಠ್ಯಪೂರಕ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ವಿದ್ಯಾರ್ಥಿನಿಯರನ್ನುದ್ದೇಶಿಸಿ ಹಿತ ನುಡಿದರು.

ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಇದರಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ನಾಯಕತ್ವ ಗುಣ ಬೆಳೆಯುತ್ತದೆ. ರೆಡ್‌ಕ್ರಾಸ್‌ನಂತಹ ಸಾಮಾಜಿಕ ಸೇವಾಸಂಸ್ಥೆಗಳಲ್ಲೂ ಪಾಲ್ಗೊಳ್ಳಿ. ಸಸಿ ನೆಡುವ, ಪರಿಸರ ಸಂರಕ್ಷಿಸುವ, ಆರೋಗ್ಯದ ಬಗ್ಗೆ ಅರಿವು ಮೂಡಿಸುವಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಿ ಎಂದು ಕಿವಿ ಮಾತು ಹೇಳಿದರು.

ಇತ್ತೀಚಿನ ದಿನಗಳಲ್ಲಿ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಕ್ಯಾನ್ಸರ್ ಕಾಯಿಲೆ ಸಾಮಾನ್ಯವಾಗಿವೆ. ಇವುಗಳಿಂದ ದೂರ ಇರಲು ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಆರೋಗ್ಯ ಬಹಳ ಮುಖ್ಯ ಎಂದು ಪ್ರತಿಪಾದಿಸಿದರು.

ಪುಸ್ತಕಗಳು ಉತ್ತಮ ಸ್ನೇಹಿತರು. ಗ್ರಂಥಾಲದಲ್ಲಿ ಪುಸ್ತಕಗಳ ಜೊತೆ ಹೆಚ್ಚಿನ ಸಮಯ ಕಳೆಯಿರಿ. ಮೊಬೈಲ್ ಬಳಕೆಯಿಂದ ಆದಷ್ಟೂ ದೂರವಿರಿ. ಮಾಹಿತಿ ಪಡೆಯಲು ಮಾತ್ರ ಮೊಬೈಲ್ ಬಳಕೆ ಮಾಡಿ. ಜಂಕ್ ಫುಡ್‌ಗಳ ಆಸೆಯಿಂದ ಕ್ರಮೇಣ ಹೊರಗೆ ಬನ್ನಿ. ಹಸಿರು ಸೊಪ್ಪು, ತರಕಾರಿ ಸೇರಿದಂತೆ ಪೌಷ್ಠಿಕ ಆಹಾರ ಸೇವಿಸಿ ಆರೋಗ್ಯ ಉತ್ತಮವಾಗಿಟ್ಟುಕೊಳ್ಳಿ ಎಂದು ಸಲಹೆ ನೀಡಿದರು.

ಪ್ರಾಂಶುಪಾಲ ಡಾ.ಮಂಜಣ್ಣ ಎಂದ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ, ವಿಶ್ರಾಂತ ಪ್ರಾಧ್ಯಾಪಕ ಡಾ.ತಿಪ್ಪಾರೆಡ್ಡಿ ಅತಿಥಿಗಳಾಗಿ ಆಗಮಿಸಿದ್ದರು. ಕು.ಪ್ರಕೃತಿ, ವರ್ಷಿತಾ ಪ್ರಾರ್ಥಿಸಿದರು. ಐಕ್ಯೂಎಸಿ ಸಂಚಾಲಕ ಡಾ.ಭೀಮಪ್ಪ ಎಂ.ಪಿ. ಸ್ವಾಗತಿಸಿದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ತೊಪ್ಪಲ ಕೆ.ಮಲ್ಲಿಕಾರ್ಜುನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಕಾವ್ಯಶ್ರೀ ಜಿ. ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಸಿಕೊಟ್ಟರು. ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಸಿದ್ದಲಿಂಗಮ್ಮ ಬಿ.ಜಿ. ಬಹುಮಾನ ವಿತರಿಸಿದರು.

ಸಿಂಧು ಹಾಗೂ ಶ್ವೇತಾ ನಿರೂಪಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಪ್ರಭು ಕೆ.ಇಂಗಲಗೊಂದಿ ವಂದಿಸಿದರು.

## ಕಿರು ಸಂವಾದ ನಡೆಸಿದ ಪ್ರಭಾ

ಪಠ್ಯಪೂರಕ ಚಟುವಟಿಕೆಗಳ ಸಮಾರೋಪ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ತಮ್ಮ ಮಾತಿನ ಆರಂಭದಲ್ಲಿ ವಿದ್ಯಾರ್ಥಿಗಳ ಮುಂದೆ ಕೆಲ ಪ್ರಶ್ನೆಗಳನ್ನಿತ್ತರು. ಯಾವ ಚಟುವಟಿಕೆ ಯಲ್ಲೂ ಭಾಗವಹಿಸದವರು ಯಾರಿದ್ದೀರಿ ಕೈ ಎತ್ತಿ ಎಂದಾಗ, ಹೆಚ್ಚಿನ ವಿದ್ಯಾರ್ಥಿಗಳು ಕೈ ಮೇಲಿತ್ತಿದರು. ಭಾಗವಹಿಸದೇ ಇದ್ದುದಕ್ಕೆ ಕಾರಣವೇನು? ಎಂದು ಸಂಸದರು ಪ್ರಶ್ನಿಸಿದಾಗ, ಓರ್ವ ವಿದ್ಯಾರ್ಥಿನಿ ಓದಲು ಸಮಯ ಸಿಗದ ಕಾರಣ ಭಾಗವಹಿಸಿಲ್ಲ ಎಂದರು.

ಮತ್ತೋರ್ವ ವಿದ್ಯಾರ್ಥಿನಿ 'ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿದರೆ ಊರಿಗೆ ಹೋಗಬೇಕಾದ ಬಸ್ ಮಿಸ್ ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಪಾಲ್ಗೊಂಡಿಲ್ಲ ಎಂದರೆ, 'ಸೀನಿಯರ್ಸ್ ಭಾಗವಹಿಸಲಿ ಎಂದು ನಾನು ಸುಮ್ಮನಿದ್ದೆ' ಎಂಬುದು ಮತ್ತೊಬ್ಬರ ಉತ್ತರವಾಗಿತ್ತು.

ಉತ್ತರ ಆಲಿಸಿದ ಡಾ.ಪ್ರಭಾ, ನಾನು ವಿದ್ಯಾರ್ಥಿನಿಯಾಗಿದ್ದಾಗ ಆಲ್‌ರೌಂಡರ್ ಆಗಿದ್ದೆ. ಎಲ್ಲಾ ಚಟುವಟಿಕೆಗಳಲ್ಲೂ ಭಾಗವಹಿಸುತ್ತಿದ್ದೆ. ನೀವೂ ಸಹ ಕನಿಷ್ಠ ಒಂದೆರಡರಲ್ಲಾದರೂ ಭಾಗವಹಿಸಿ ಎಂದು ಸಲಹೆ ನೀಡಿದರು.

## ನಗರದಲ್ಲಿ ಇಂದು ಲೋಕ್ ಅದಾಲತ್

ಬಾಪೂಜಿ ಶೈಕ್ಷಣಿಕ ಸಂಘ, ಆರ್. ಎಲ್. ಕಾನೂನು ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಲೋಕ ಅದಾಲತ್ ಜಾಗೃತಿ ಜಾಥಾದ ಉದ್ಘಾಟನೆ ಇಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ. ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ರ‍್ಯಾಲಿಗೆ ಚಾಲನೆ ನೀಡುವರು.

ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮಾ.ಕರೆಣ್ಣ ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣ್ ಕುಮಾರ್, ಆರ್. ಎಲ್.ಕಾನೂನು ಕಾಲೇಜಿನ ಪ್ರಾಚಾರ್ಯ ಡಾ.ಜಿ.ಎಸ್.ಯತೀಶ್, ಪ್ರಿನ್ಸಿಪಾಲ್, ಐಕ್ಯೂಎಸಿ ಸಹ ಸಂಚಾಲಕ ಬಿ.ಪಿ.ಬಸವ ನಗೌಡ, ಕಾರ್ಯಕ್ರಮದ ಸಂಚಾಲಕ ಟಿ. ವಿದ್ಯಾಧರ ವೇದವರ್ಮ ಆಗಮಿಸಲಿದ್ದಾರೆ.

## ನಗರದಲ್ಲಿ ಅಧಿವಕ್ತಾ ಪರಿಷತ್ ಉಪನ್ಯಾಸ

ಅಧಿವಕ್ತ ಪರಿಷತ್, ಕರ್ನಾಟಕ ದಕ್ಷಿಣ ಪ್ರಾಂತದ ದಾವಣಗೆರೆ ಜಿಲ್ಲಾ ಘಟಕ, ಬಿ.ಎನ್.ಎಸ್.ಎಸ್., ಬಿ.ಎನ್. ಎಸ್., ಬಿ.ಎಸ್.ಎ. ಕಾನೂನುಗಳ ಕುರಿತು ವಿಶೇಷ ಉಪನ್ಯಾಸ ಕಾರ್ಯ ಕ್ರಮವನ್ನು ಜೆ.ಪಿ. ಫಂಕ್ಷನ್ ಹಾಲ್‌ನಲ್ಲಿ ಇಂದು ಮಧ್ಯಾಹ್ನ 2.30ರಿಂದ ಏರ್ಪಡಿಸಲಾಗಿದೆ. ಕಾರ್ಯಕ್ರಮ ಅಧ್ಯಕ್ಷತೆಯನ್ನು ಹಿರಿಯ ವಕೀಲ ಎಲ್.ದಯಾನಂದ್ ವಹಿಸುವರು. ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಉದ್ಘಾಟಿಸುವರು. ಹೆಚ್.ಡಿ. ಆನಂದ ಕುಮಾರ್ ಉಪನ್ಯಾಸ ನೀಡುವರು. ಅಜಿತ್ ಕುಮಾರ್ ಡಿ. ಹಮ್ಮಿಗ್ಗಿ, ಎಂ. ಎಸ್. ಮಜೋಜ್ ಕುಮಾರ್, ಟಿ.ಎಂ. ಅನ್ನಪೂರ್ಣ ಉಪಸ್ಥಿತರಿರುವರು.

# ಸ್ವತಂತ್ರರಾಗಿ ಬದುಕಲು ಪಠ್ಯೇತರ ಚಟುವಟಿಕೆ ಸಹಕಾರಿ



**ಬಿ.ಎಸ್.ಸಿ. ಪ್ರಥಮ ದರ್ಜೆ ಕಾಲೇಜಿನ ಕಾರ್ಯಕ್ರಮದಲ್ಲಿ ಉದ್ಯಮಿ ಎಂ.ಕೆ. ವೀರೇಂದ್ರ**

ದಾವಣಗೆರೆ, ಜು. 10- ಸ್ವತಂತ್ರರಾಗಿ ಬದುಕಲು ಕ್ರೀಡೆ, ಸಾಂಸ್ಕೃತಿಕ , ರೆಡ್‌ಕ್ರಾಸ್ ಸೇರಿದಂತೆ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳಿಗೆ ಸಹಕಾರಿಯಾಗಲಿವೆ ಎಂದು ಹುಬ್ಬಳ್ಳಿ-ದಾವಣಗೆರೆ ಉದ್ಯಮಿ ಎಂ.ಕೆ. ವೀರೇಂದ್ರ ಹೇಳಿದರು.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ನಿನ್ನೆ ನಡೆದ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ 2023-24 ನೇ ಸಾಲಿನ ವಿದ್ಯಾರ್ಥಿ ಸಂಘ, ಕ್ರೀಡಾ, ಸಾಂಸ್ಕೃತಿಕ, ಎನ್‌ಎಸ್‌ಎಸ್, ರೆಡ್‌ಕ್ರಾಸ್ ಘಟಕಗಳ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಗುರುಗಳು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಇರಬೇಕು, ನಾನು ವಿದ್ಯಾರ್ಥಿ ದೆಶೆಯಲ್ಲಿ ಸಾಕಷ್ಟು ಸ್ನೇಹಿತರಂತಿರುವ ಗುರುಗಳ ಒಡನಾಟದಲ್ಲಿ ಇದ್ದೆ, ಮುಂಚೆ ಇದೇ ಕಾಲೇಜಿನ ವಿದ್ಯಾರ್ಥಿಯಾಗಿ ಸಾಕಷ್ಟು ಕಲಿತಿದ್ದು, ಇಂದು ನಾನು ಉದ್ದಿಮೆದಾರನಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಹೇಳಿದರು.

ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಪದವಿ ನಿಮ್ಮ ಮುಂದಿನ ಭವಿಷ್ಯಕ್ಕೆ ಒಂದು ಹಂತ ಮಾತ್ರ. ಆದರೆ ಕ್ರೀಡೆ, ಎನ್‌ಎಸ್‌ಎಸ್, ರೆಡ್ ಕ್ರಾಸ್, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಿಮ್ಮ ಜ್ಞಾನ ಹೆಚ್ಚಿಸಿಕೊಳ್ಳಿ, ವಿದ್ಯಾರ್ಥಿ ಜೀವನದಲ್ಲಿ ಕಲಿಯುವುದಕ್ಕೆ ಸಾಕಷ್ಟು ಅವಕಾಶಗಳು ಇವೆ, ಈ ಪದವಿ ಜೊತೆಗೆ ಬೇರೆ ಬೇರೆ ಕೋರ್ಸ್ ಗಳನ್ನೂ ಕಲಿತು ಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದು ಸ್ಪರ್ಧಾತ್ಮಕ ಯುಗ ನಿಮ್ಮ ಕಲಿಕೆ ಭಾಗವಹಿಸುವಿಕೆ ವೇಗವಾಗಿ ಇರಬೇಕು, ಗುಣಾತ್ಮಕ ಶಿಕ್ಷಣ ಕೊಡುವುದು ನಮ್ಮ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಕೇವಲ ಒಂಬತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ನಮ್ಮ ಕಾಲೇಜು ಈಗ ಒಂದು ಸಾವಿರ ವಿದ್ಯಾರ್ಥಿಗಳನ್ನು ತಲುಪಿದೆ. ಇದು ಗುಣಾತ್ಮಕ ಶಿಕ್ಷಣದ ಪ್ರತಿಫಲ ಎಂದರು.

ಬೇರೆ ಬೇರೆ ಕಾಲೇಜು ಇವೆಂಟ್‌ಗಳಲ್ಲಿ ಭಾಗವಹಿಸಿ ಎಲ್ಲಾ ಹಂತಗಳಲ್ಲೂ ಜ್ಞಾನ ಸಂಪಾದಿಸಿ ಹಾಗೂ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ ಎಂದು ನುಡಿದರು.

ವಿನೂತನ ಮ್ಯಾನೇಜ್‌ಮೆಂಟ್ ಫೆಸ್ಟ್ ಆಯೋಜಿಸಿದ್ದು, ಅದರಲ್ಲಿ ಪ್ರಥಮ ವರ್ಷದ ಬಿ.ಬಿ.ಎ. ವಿದ್ಯಾರ್ಥಿಗಳು ಹಾಗೂ ಪ್ರಥಮ ವರ್ಷದ ಬಿ.ಸಿ.ಎ. 'ಸಿ' ವಿಭಾಗ ಜಂಟಿಯಾಗಿ ಚಾಂಪಿಯನ್ ಶಿಪ್ ಪಡೆದರು. ಎನ್.ಎಸ್.ಎಸ್. ಘಟಕದಿಂದ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಆಯ್ಕೆ ಆಗಿದ್ದ ಹೆಚ್.ಎಂ. ಅಭಿಷೇಕ್ ಅವರನ್ನು ಸನ್ಮಾನಿಸಲಾಯಿತು.

ವೀರೇಶ್ ಜೆ. ದ್ಯಾಮನಗೌಡರು ಹಾಗೂ ಉಮಾಮಹೇಶ್ವರಿ ಅತ್ಯುತ್ತಮ ಎನ್ ಎಸ್ ಎಸ್ ಸ್ವಯಂ ಸೇವಕ ಪ್ರಶಸ್ತಿಗೆ ಭಾಜನರಾದರು.

ಕಾಲೇಜಿನ ಪ್ರಾಂಶಪಾಲರಾದ ಪ್ರೊ. ಎಂ.ಸಿ. ಗುರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ವಿನಾಯಕ ಎಜುಕೇಶನ್ ಟ್ರಸ್ಟ್ ಸದಸ್ಯರೂ ಆದ ವೆಂಕಟ ರೆಡ್ಡಿ, ಡಾ. ಹೆಚ್. ಬಿ. ಮೋಹನ್, ಎಸ್ ಬಿ ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಪ್ರಾಂಶುಪಾಲ ಡಾ. ಕೆ. ಷಣ್ಮುಖ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶಪಾಲರಾದ ಶ್ರೀಮತಿ ಡಯಾನ ದಿವ್ಯ ಉಪಸ್ಥಿತರಿದ್ದರು.

ಕು. ಶಾಜಿಯಾ ನಿರೂಪಿಸಿದರು, ಕು. ಸಹನ ಸ್ವಾಗತಿಸಿದರು. ಕು. ಸಿರಿ ಗೌರಿ ವಂದಿಸಿದರು.

## ಜಿಗಳಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಡಿ.ಎಂ. ಹರೀಶ್



ದಾವಣಗೆರೆ, ಜು.10- ಜಿಗಳಿ ಗ್ರಾ.ಪಂ ಉಪಾಧ್ಯಕ್ಷರಾಗಿ ಡಿ.ಎಂ. ಹರೀಶ್ ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜಿ.ಬೇವಿನಹಳ್ಳಿ ಹೋಬಳಿ ಆನಂದಗೌಡ ಅವರ ರಾಜೀನಾಮೆಯಿಂದಾಗಿ ಉಪಾಧ್ಯಕ್ಷ ಸ್ಥಾನ ತೆರವಾಗಿತ್ತು. ತೋಟಗಾರಿಕೆ ಇಲಾಖೆಯ ಶಶಿಧರಸ್ವಾಮಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಪಿ.ಡಿ.ಓ ಉಮೇಶ್, ಗ್ರಾ.ಪಂ. ಕಾರ್ಯದರ್ಶಿ ಸುನೀತಾ ಸಹಕರಿಸಿದರು. ಗ್ರಾ.ಪಂ ಅಧ್ಯಕ್ಷೆ ರೂಪಾ ಸೋಮಶೇಖರ್, ಸದಸ್ಯರಾದ ಆನಂದಗೌಡ, ಜಿ. ಬಸವರಾಜ್, ಮಲ್ಲನಗೌಡ, ಚೇತನ್, ಮಹಾಂತೇಶ್, ದೇವರಾಜ್, ಆಶಾ ಅಣ್ಣಪ್ಪ, ರೇಣುಕಮ್ಮ ರಂಗಪ್ಪ, ಕರಿಯಮ್ಮ ಕವಿತಾ ಶಿವು, ಮಂಜುಳಾ ಪರಮೇಶ್ವರಪ್ಪ, ವಿನೋದ ಹಾಲೇಶ್, ರೇಣುಕಾ ನಾಗರಾಜ್, ಬಸಾಪುರದ ಹನುಮಂತಪ್ಪ ಮತ್ತು ಮುಖಂಡರಾದ ಡಿ.ಎಚ್. ಮಂಜುನಾಥ್, ಜಿ.ಆನಂದಪ್ಪ, ಬಿ.ಎಂ. ದೇವೇಂದ್ರಪ್ಪ, ಜಿ.ಎಂ. ಆನಂದಪ್ಪ, ಪತ್ರಕರ್ತ ಪ್ರಕಾಶ್, ಕೆಂಚಪ್ಪ ಮತ್ತಿತರರಿದ್ದರು.

## ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಫಲಿತಾಂಶ ಪ್ರಕಟ, ಬಾಲಕಿಯರ ಮೇಲುಗೈ

ದಾವಣಗೆರೆ, ಜು. 10 - 2024ರಲ್ಲಿ ನಡೆದ ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ-2 ರ ಫಲಿತಾಂಶ ಪ್ರಕಟವಾಗಿದ್ದು, ಜಿಲ್ಲೆಯಲ್ಲಿ ಶೇ.29.73 ಗಂಡು, ಶೇ.44.08 ರಷ್ಟು ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಉಪನಿರ್ದೇಶಕ ಜಿ. ಕೊಟ್ರೇಶ್ ತಿಳಿಸಿದ್ದಾರೆ.

**ತಾಲ್ಲೂಕುವಾರು ವಿವರದನ್ವಯ :** ಚನ್ನಗಿರಿ ತಾಲ್ಲೂಕಿನಲ್ಲಿ ಒಟ್ಟು 1135 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 234 ಗಂಡು, 217 ಹೆಣ್ಣು ಮಕ್ಕಳು ಉತ್ತೀರ್ಣರಾಗಿರುತ್ತಾರೆ. ಹೊನ್ನಾಳಿ ತಾಲ್ಲೂಕಿನಲ್ಲಿ ಒಟ್ಟು 577 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇದರಲ್ಲಿ 115 ಗಂಡು, 97 ಹೆಣ್ಣು ಮಕ್ಕಳು ಉತ್ತೀರ್ಣ, ಜಗಳೂರು ಒಟ್ಟು 729 ವಿದ್ಯಾರ್ಥಿಗಳು ಪರೀಕ್ಷೆ ಬರೆದು 145 ಗಂಡು, 122 ಹೆಣ್ಣು ಮಕ್ಕಳು, ದಾವಣಗೆರೆ ಉತ್ತರ ಒಟ್ಟು 808 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 172 ಗಂಡು, 113 ಹೆಣ್ಣು ಮಕ್ಕಳು ಉತ್ತೀರ್ಣರಾಗಿರುತ್ತಾರೆ. ದಾವಣಗೆರೆ ದಕ್ಷಿಣ ಒಟ್ಟು 1008 ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ. ಇದರಲ್ಲಿ 193 ಗಂಡು, 156 ಹೆಣ್ಣು ಮಕ್ಕಳು ಉತ್ತೀರ್ಣ, ಹರಿಹರ ಒಟ್ಟು 1114 ವಿದ್ಯಾರ್ಥಿಗಳು ಪರೀಕ್ಷೆ ಬರೆದಿರುತ್ತಾರೆ. ಇದರಲ್ಲಿ 170 ಗಂಡು ಹಾಗೂ 137 ಹೆಣ್ಣು ಮಕ್ಕಳು ಉತ್ತೀರ್ಣರಾಗಿರುತ್ತಾರೆ.

## ಸೊಳ್ಳೆ ನಿಯಂತ್ರಣಕ್ಕೆ ಮನೆ ಮದ್ದು

ದಾವಣಗೆರೆ, ಜು.10- ಮನೆಯಲ್ಲಿ ಸಿಗುವ ಶುಂಠಿ, ಬೆಳ್ಳುಳ್ಳಿ ಸೇರಿದಂತೆ ಇತರೆ ಮನೆ ಮದ್ದುಗಳನ್ನು ಬಳಕೆ ಮಾಡಿ ಸೊಳ್ಳೆಗಳನ್ನು ಮನೆಯಿಂದ ಹೊರ ಹಾಕುವ ಮೂಲಕ ನಿಯಂತ್ರಣ ಮಾಡಬಹುದು ಎಂದು ಕರ್ನಾಟಕ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಮ್ಯಾನುಫ್ಯಾಕ್ಚರರ್ಸ್ ಅಸೋಸಿಯೇಷನ್ ಅಧ್ಯಕ್ಷ ಡಾ. ಪ್ರಶಾಂತ್ ಆರಾಧ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎರಡು ಇಂಚು ಶುಂಠಿ, 10 ತುಂಡು ಬೆಳ್ಳುಳ್ಳಿ, ಎರಡು ಇಂಚು ಚಕ್ಕೆ, 20 ಲವಂಗ ಪುಡಿ ಮಾಡಿ 10 ಬೇವಿನ ಎಲೆಗಳನ್ನು ಸಣ್ಣದಾಗಿ ಕತ್ತರಿಸಿ ಎಲ್ಲಾ ಪದಾರ್ಥಗಳನ್ನು ಒಂದು ಪಾತ್ರೆಯಲ್ಲಿ ಹಾಕಿ, ಒಂದೂವರೆ ಲೀಟರ್ ನೀರನ್ನು ಬೆರೆಸಿ ಕುದಿಸಿ, ಒಂದು ಲೀಟರ್‌ಗೆ ಬರುವಂತೆ ನೋಡಿಕೊಂಡು ನಂತರ ಆ ನೀರು ತಣ್ಣಗಾದ ಮೇಲೆ ಶೋಧಿಸಿ, 20 ಕರ್ಪೂರಗಳನ್ನು ಪುಡಿ ಮಾಡಿ ಬೆರೆಸಬೇಕೆಂದರು. 10 ಅಜ್ವಾನದ ಎಲೆಗಳನ್ನು ಜಜ್ಜಿ ಅದರಲ್ಲಿ ಬರುವ ರಸವನ್ನು ಮಿಶ್ರಣದಲ್ಲಿ ಬೆರೆಸಿ, ಇವೆಲ್ಲವನ್ನೂ ಒಂದು ಸ್ಪ್ರೇ ಬಾಟಲಿಯಲ್ಲಿ ಹಾಕಿ, ಮನೆಯ ಒಳಗೆ, ಹೊರಗೆ ಸಿಂಪಡಿಸಿದರೆ ಸೊಳ್ಳೆಗಳನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿಡಬಹುದು ಎಂದರು.

ಡೆಂಗ್ಯೂ ಜ್ವರ ಬಂದವರು, ವೈದ್ಯರು ನೀಡುವ ಔಷಧಿ ಜೊತೆಗೆ ಪಪ್ಪಾಯಿ ಎಲೆಗಳನ್ನು ಕುದಿಸಿ, ಶೋಧಿಸಿ ಕುಡಿಯುವುದರಿಂದ ಜ್ವರ ಕಡಿಮೆಯಾಗಲು ಸಹಕರಿಸುತ್ತದೆ ಎಂದು ತಿಳಿಸಿದರು.

ಬೇವಿನ ಸೊಪ್ಪನ್ನು ರುಬ್ಬಿ, ಕೊಬ್ಬರಿ ಎಣ್ಣೆಯ ಜೊತೆಗೆ ಕುದಿಸಿ, ಹೊರಗಡೆ ಹೋಗುವಾಗ ಚರ್ಮಕ್ಕೆ ಹಚ್ಚಿದಲ್ಲಿ ಸೊಳ್ಳೆಗಳು ಕಚ್ಚುವುದಿಲ್ಲ. ಇದರಿಂದ ಅನೇಕ ಕಾಯಿಲೆಗಳಿಗೂ ಸಹಕಾರಿಯಾಗುತ್ತದೆ ಎಂದರು.

# ಸಿವಿಲ್ ಇಂಜಿನಿಯರ್‌ಗಳ ಮಾನ್ಯತೆಗೆ ಮಸೂದೆ



ದಾವಣಗೆರೆ, ಜು.10- ಮನೆ ಮತ್ತು ಇತರೆ ಕಟ್ಟಡಗಳನ್ನು ತಮ್ಮ ಮನ ಬಂದಂತೆ ನೀಲಿ ನಕ್ಷೆ ತಯಾರಿಸಿ ಇರುವ ಕಾನೂನನ್ನು ಉಲ್ಲಂಘಿಸಿ ಹಿಂಬಾಗಿಲಿನಿಂದ ಪರವಾನಿಗೆ ಪಡೆದು ಇಂಜಿನಿಯರ್‌ಗಳಂತೆ ವರ್ತಿಸಿ, ಕಟ್ಟಡಗಳನ್ನು ಕಟ್ಟುತ್ತಿರುವ ಜನರಿಗೆ ಲೆಕ್ಕವಿಲ್ಲ. ಇಂತವರಿಂದ ನಿಜವಾದ ಸಿವಿಲ್ ಇಂಜಿನಿಯರ್‌ಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಇನ್ನು ಮುಂದೆ ಅಂತಹ ನಕಲಿ ಇಂಜಿನಿಯರ್‌ಗಳ ದುಸ್ಸಾಹಸಕ್ಕೆ ತೆರೆ ಬೀಳಲಿದೆ. ಕಾರಣ ನಿಜವಾದ ಸಿವಿಲ್ ಇಂಜಿನಿಯರ್‌ಗಳಿಗೆ ಮಾನ್ಯತೆ ದೊರೆಯಲಿದೆ. ಇತ್ತೀಚೆಗಷ್ಟೆ 'ಕರ್ನಾಟಕ ವೃತ್ತಿಪರ ಸಿವಿಲ್ ಇಂಜಿನಿಯರ್‌ಗಳ ಮಸೂದೆ' ಜಾರಿಯಾಗಿದೆ. ಇಂಜಿನಿಯರ್‌ಗಳು ಕಳೆದ ಮೂರು ದಶಕಗಳ ನಿರಂತರ ಹೋರಾಟಕ್ಕೆ ಜಯ ದೊರೆತಿದೆ.

ಈ ಹೋರಾಟದ ಮುಂಚೂಣಿಯಲ್ಲಿದ್ದ ಇಂಜಿನಿಯರ್‌ಗಳಾದ ಶ್ರೀಕಾಂತ್ ಚನ್ನಲ್, ಡಾ. ಮನಮೋಹನ್ ಆರ್. ಕಲ್ಗಲ್, ಅಜಿತ್ ಕುಮಾರ್ ಎಸ್. ಮುಗ್ದಮ್, ಡಿ. ರಂಗನಾಥ್, ಎಚ್. ಆರ್. ಗಿರೀಶ್ ಹಾಗೂ ರಾಜೇಶ್ ಕಣ್ಣನ್ ಅವರನ್ನು ದಾವಣಗೆರೆ ವೃತ್ತಿನಿರತ ಸಿವಿಲ್ ಇಂಜಿನಿಯರ್‌ಗಳ ಒಕ್ಕೂಟ ಎಫ್. ಪೇಸ್ ವತಿಯಿಂದ ಸನ್ಮಾನಿಸಲಾಯಿತು.

ಅಸ್ಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಆಫ್ ಇಂಡಿಯಾ, ಇನ್ ಸ್ಟ್ರಕ್ಟ್, ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಇವುಗಳ ದಾವಣಗೆರೆ ಘಟಕಗಳ ಸಹಯೋಗದಲ್ಲಿ ನಡೆದ ಸಮಾರಂಭದಲ್ಲಿ ದಾವಣಗೆರೆ, ಹರಿಹರ, ಶಿವಮೊಗ್ಗ, ರಾಣೇಬೆನ್ನೂರು, ಚಿತ್ರದುರ್ಗ, ಬಳ್ಳಾರಿ ಮುಂತಾದ ಕಡೆಗಳಿಂದ ವೃತ್ತಿಪರ ಸಿವಿಲ್ ಇಂಜಿನಿಯರ್ಸ್ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್ ಗಳ ಮಸೂದೆ ಮೂಲಕ ಎಂಜಿನಿಯರ್‌ಗಳಿಗೆ ಮಾನ್ಯತೆ ದೊರೆತಂತಾಗಿದೆ. ಈ ಮೂಲಕ ಸಿವಿಲ್ ಎಂಜಿನಿಯರ್‌ಗಳ ಜವಾಬ್ದಾರಿ ಹೆಚ್ಚಾಗಿದೆ ಎಂದು ಕರ್ನಾಟಕ ವೃತ್ತಿಪರ ಸಿವಿಲ್ ಎಂಜಿನಿಯರ್‌ಗಳ ಮಸೂದೆ (ಕೆಪಿಸಿಇಎ) ಸಲಹೆಗಾರ ಡಿ. ರಂಗನಾಥ್ ಹೇಳಿದರು.

ಇನ್ನು ಮುಂದೆ ಕಂಡಕಂಡವರು ಎಂಜಿನಿಯರ್ ಎಂದು ಹೇಳಿಕೊಳ್ಳುವಂತಿಲ್ಲ. ನೋಂದಾಯಿತ ಸಿವಿಲ್ ಎಂಜಿನಿಯರ್ ಮಾತ್ರ ಎಂಜಿನಿಯರ್ ಆಗಿರುತ್ತಾರೆ. ನೋಂದಾಯಿತ ಎಂಜಿನಿಯರ್‌ಗಳ ಸಹಿ ಇಲ್ಲದ ಕಟ್ಟಡದ ನಕ್ಷೆಗೆ ಸಂಬಂಧಿಸಿದ ಪ್ರಾಧಿಕಾರಗಳು ಅನುಮೋದನೆ ನೀಡುವಂತಿಲ್ಲ. ಎಂಜಿನಿಯರ್ ಅಲ್ಲದವರು ನಕ್ಷೆ ಕೊಟ್ಟು, ಮನೆ ನಿರ್ಮಿಸಿದರೆ ಕಾನೂನು ರೀತಿ ಶಿಕ್ಷೆಗೆ ಒಳಪಡುತ್ತಾರೆ. ಅಲ್ಲದೆ, ನೋಂದಾಯಿತ ಎಂಜಿನಿಯರ್‌ಗಳ ಕಾರ್ಯ ನಿರ್ವಹಣೆ ಕೂಡ ಕಾಯ್ದೆ, ಕಾನೂನು ವ್ಯಾಪ್ತಿಗೆ ಬರಲಿದ್ದು, ಆ ಕಾನೂನು, ನಿಯಮಗಳನ್ನು ಮೀರುವ ಎಂಜಿನಿಯರ್‌ಗಳ ಮಾನ್ಯತೆ ರದ್ದು ಮಾಡಲು ಅವಕಾಶವಿರುತ್ತದೆ. ಆದ್ದರಿಂದ ಇನ್ನು ಮುಂದೆ ಸಿವಿಲ್ ಇಂಜಿನಿಯರ್‌ಗಳು ಹೆಚ್ಚು ಜವಬ್ದಾರಿಯಿಂದ ಕೆಲಸ ಮಾಡಬೇಕಿದೆ ಎಂದು ರಂಗನಾಥ್ ಎಚ್ಚರಿಕೆ ನೀಡಿದರು.

ದಾವಣಗೆರೆ ಎಸ್‌ಎಸ್ ಬಡಾವಣೆಯಲ್ಲಿ ಎಫ್.ಪಿ.ಎ.ಸಿ ಭವನದಲ್ಲಿ ನಡೆದ ಕಾರ್ಯಕ್ರಮವನ್ನು ಡಾ॥ ಮನಮೋಹನ್ ಆರ್. ಕಲ್ಕಲ್ ಉದ್ಘಾಟಿಸಿದರು. ಕಾರ್ಯಕ್ರಮದ ಸಂಚಾಲಕ ಜಿ.ಬಿ. ಸುರೇಶ್ ಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಎಫ್. ಪಿ.ಎ.ಸಿ.ಇ. ಅಧ್ಯಕ್ಷ ಇ. ದೇವೇಂದ್ರಪ್ಪ, ಎ.ಸಿ.ಸಿ.ಇ.ಐ ಕಾರ್ಯಾಧ್ಯಕ್ಷ ವೆಂಕಟರಮಣ ರೆಡ್ಡಿ, ಕಾರ್ಯದರ್ಶಿ ಯು.ಆರ್. ಕೊಟ್ರೇಶ್, ಇಂಡಿಯನ್ ಕಾಂಕ್ರೀಟ್ ಇನ್ ಸ್ಟಿಟ್ಯೂಟ್ ಕಾರ್ಯಾಧ್ಯಕ್ಷ ಜಿ.ಎಂ. ಲೋಹಿತಾಶ್ವ, ಧಾರವಾಡದ ಐ.ಸಿ.ಐ ಕಾರ್ಯಾಧ್ಯಕ್ಷ ವಿಜಯ್, ತೋಟಿಗಾರ್, ರಾಣೇಬೆನ್ನೂರ್ ಎಂಜಿನಿಯರ್‌ಗಳಾದ ಷಣ್ಮುಖ, ಚಿತ್ರದುರ್ಗದ ಶ್ರೀಕಾಂತ್, ಶಿವಮೊಗ್ಗದ ಸಂಜೀವ್ ಪ್ರಸಾದ್, ಶಿವಮೊಗ್ಗದ ಜಯಚಂದ್, ಹಿರಿಯ ಇಂಜಿನಿಯರ್‌ಗಳಾದ, ಶರಣಪ್ಪ, ಆರ್.ಎಸ್. ವಿಜಯಾನಂದ್, ಡಿ. ನಾಗರಾಜ್, ಇ.ಎಂ. ಎಸ್. ಖಾನ್, ಎ.ಬಿ. ರವಿ., ಎಂ.ಎಸ್. ಕುಮಾರ್, ಕೆ.ಎಂ.ಕೆ. ಮೂರ್ತಿ, ಪ್ರಕಾಶ್ ಮುಳೆ ಹಾಗೂ ಆರ್.ಟಿ. ಅರುಣ್ ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಅತ್ಯಾಧುನಿಕ ಕ್ಯಾತ್ ಲ್ಯಾಬ್ ಉದ್ಘಾಟನೆ

ಎಸ್.ಎಸ್.ನಾರಾಯಣ ಸೂಪರ್ ಸ್ಪೆಷಾಲಿಟಿ ಸೆಂಟರ್ ಆವರಣದಲ್ಲಿ ನಿರ್ಮಿಸಿರುವ ನೂತನ ಅತ್ಯಾಧುನಿಕ ಕ್ಯಾತ್ ಲ್ಯಾಬ್ ಉದ್ಘಾಟನೆ ಕಾರ್ಯಕ್ರಮವನ್ನು ಇಂದು ಮಧ್ಯಾಹ್ನ 12 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ನಾರಾಯಣ ಹೆಲ್ತ್ ಸಮೂಹದ ಕರ್ನಾಟಕ ಕ್ಲಸ್ಟರ್ ನಿರ್ದೇಶಕರಾದ ಡಾ.ವಿಜಯ್ ಸಿಂಗ್ ಅವರುಗಳು ಆಗಮಿಸಲಿದ್ದಾರೆ.


**ಶಿವ ಸಹಕಾರಿ ಬ್ಯಾಂಕ್ ನಿಯಮಿತ**

ಆಡಳಿತ ಕಛೇರಿ ಮತ್ತು ಪ್ರಧಾನ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ-577 001.
ಫೋ. : 08192-256107, ಮೊ. : 9449819322





**ಅಭಿನಂದನೆಗಳು**

**ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ**
ದಾವಣಗೆರೆ ಜಿಲ್ಲಾ ಅಧ್ಯಕ್ಷರಾಗಿ ಅವಿರೋಧವಾಗಿ
ಆಯ್ಕೆಯಾಗಿರುವ ನಮ್ಮ ಬ್ಯಾಂಕಿನ ಉಪಾಧ್ಯಕ್ಷರಾದ
**ಶ್ರೀಯುತ ಐಗೂರು ಸಿ. ಚಂದ್ರಶೇಖರ್**
ಮತ್ತು ನಮ್ಮ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾದ
**ಡಾ॥ ಹೆಚ್.ಎಸ್. ಮಂಜುನಾಥ್ ಕುರ್ಕಿ**

ಇವರು ಸದರಿ ಮಹಾಸಭಾದ ಜಿಲ್ಲಾ ಘಟಕದ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಆಯ್ಕೆ ಆಗಿರುತ್ತಾರೆ. ಇವರುಗಳಿಗೆ ಹಾಗೂ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಬ್ಯಾಂಕಿನ ಆಡಳಿತ ಮಂಡಳಿ, ಸಿಬ್ಬಂದಿ ಹಾಗೂ ಸದಸ್ಯರ ಪರವಾಗಿ ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಇವರ ಅಧಿಕಾರ ಅವಧಿಯಲ್ಲಿ ಉತ್ತಮ ಸಮಾಜಮುಖಿ ಕಾರ್ಯಗಳು ನೆರವೇರಲಿ ಎಂದು ಆಶಿಸುತ್ತೇವೆ.

ಬ್ಯಾಂಕಿನ ಆಡಳಿತ ಮಂಡಲಿಯ ಅಧ್ಯಕ್ಷರಾದ ಎಂ.ಬಿ. **ಸಂಗಮೇಶ್ವರಗೌಡರು** ಹಾಗೂ
ನಿರ್ದೇಶಕರುಗಳಾದ **ದೊಗ್ಗಳ್ಳಿ ಎಂ. ಬಸವರಾಜ್‌ರವರು, ಬಿ.ಎಸ್. ಪ್ರಕಾಶ್‌ರವರು, ಡಿ.ಹೆಚ್. ಪ್ರಭುರವರು,**
**ಕೆ.ಪಿ. ಪ್ರದೀಪ್‌ರವರು, ಜಿ. ಸಿದ್ದಪ್ಪನವರು, ಜಿ.ಪಿ. ವಾಗೀಶ್ ಬಾಬುರವರು, ಜೆ.ಎಸ್. ಸಿದ್ದಪ್ಪನವರು,**
**ಶ್ರೀಮತಿ ಎನ್. ವಸಂತರವರು, ಶ್ರೀಮತಿ ಡಿ. ನಿರ್ಮಲರವರು** ಹಾಗೂ ವೃತ್ತಿಪರ ನಿರ್ದೇಶಕರಾದ **ಈ. ಚಂದ್ರಣ್ಣನವರು.**
ಬ್ಯಾಂಕಿನ ವ್ಯವಸ್ಥಾಪನಾ ಸಮಿತಿ ಸದಸ್ಯರಾದ **ಎಂ.ಜಿ. ರಾಜಶೇಖರಯ್ಯ,** ಮತ್ತು **ಬಿ. ಕುಬೇರಪ್ಪನವರು,**
**ಜಿ. ನಂಜನಗೌಡ್ರು** ಹಾಗೂ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಮತ್ತು ಬ್ಯಾಂಕಿನ ಸಿಬ್ಬಂದಿ ವರ್ಗದವರು.




# ತುಂಬಿದ ತುಂಗಭದ್ರೆ, ಖಾಲಿ ಕುಮದ್ವತಿ...

ರಾಣೇಬೆನ್ನೂರು, ಜು. 10- ನಾಡಿನ ಎಲ್ಲೆಡೆ ವರುಣನ ಕೃಪೆಯಿಂದ ಹಳ್ಳ-ಕೊಳ್ಳಗಳು, ಕೆರೆ-ಕಟ್ಟೆಗಳು ತುಂಬಿದ್ದು ಜೋಗವೂ ಸೇರಿದಂತೆ ವಿವಿಧ ಸಣ್ಣ-ಪುಟ್ಟ ಜಲಪಾತಗಳ ಭೋರ್ಗರೆತ ಕೇಳಿಬರುತ್ತಿದೆ. ಆದರೆ ಹಾವೇರಿ ಜಿಲ್ಲೆಯಲ್ಲಿನ ಮದಗದ ಕೆರೆ ಬರಿದಾಗಿದ್ದು, ಕುಮದ್ವತಿ ನದಿ ಬತ್ತಿದೆ.

ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ಹಾಗೂ ರಾಣೇಬೆನ್ನೂರು ತಾಲ್ಲೂಕುಗಳಲ್ಲಿ ಸುಮಾರು 80 ಕಿ.ಮೀ ನಷ್ಟು ಹರಿಯುವ ಹಿರೇಹೊಳಿ ತುಂಗಭದ್ರೆಯು ಮೈದುಂಬಿ ಸಾಗರ ಸೇರುವ ತವಕದಲ್ಲಿ ಮುನ್ನಡೆದಿದ್ದಾಳೆ. ಈ ತಾಲ್ಲೂಕುಗಳಲ್ಲೇ 80 ಕಿ.ಮೀ. ನಷ್ಟು ಹರಿಯುತ್ತಿರುವ ಚಿಗಹೊಳಿ ಕುಮದ್ವತಿ ತುಂಗಭದ್ರೆಯನ್ನೂ ಸೇರಲಾಗದೇ ತನ್ನೊಡಲು ಒಣಗಿಸಿಕೊಂಡಿದ್ದಾಳೆ.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಅಂಜನಾಪುರ ಕೆರೆಯ ಡ್ಯಾಂ ತುಂಬಿದರೆ ಐತಿಹಾಸಿಕ ಮದಗದ ಮಾಸೂರು ಕೆರೆಗೆ ನೀರು ಬಂದು ಕೋಡಿ ಬಿದ್ದು ಜಲಪಾತದ ಭೋರ್ಗರೆತ ದೊಂದಿಗೆ ಕುಮದ್ವತಿ ಮೈದುಂಬಿಕೊಳ್ಳುತ್ತಾಳೆ. ಆದರೆ ಆ ಸೊಬಗು ಇದುವರೆಗೂ ಕಾಣುತ್ತಿಲ್ಲ. ಮದಗದ ಕೆರೆಯ ಅಲ್ಲಲ್ಲಿನ ಗುಂಡಿಗಳಲ್ಲಿ ಸುತ್ತಲಿನ ಮಳೆಯ ನೀರಷ್ಟೆ ಸಂಗ್ರಹವಾಗಿದ್ದು ಕಂಡುಬರುತ್ತಿದೆ.

ಕುಮದ್ವತಿಯ ಬರಿದಾದ ಒಡಲಿನಿಂದಾಗಿ ರಟ್ಟಿಹಳ್ಳಿ ತಾಲ್ಲೂಕಿನ ಮಾಸೂರು, ಖಂಡೇ ಬಾಗೂರು, ಮಳಗಿ, ಕೋಡಮಗ್ಗಿ, ತಿಪ್ಪಾಯಿಕೊಪ್ಪ, ಹಿರೇಮೊರಬ, ಚಿಕ್ಕಮೊರಬ, ಎಲಿವಾಳ, ರಟ್ಟಿಹಳ್ಳಿ, ತೋಟಗಂಟಿ, ಸಣ್ಣಗುಬ್ಬಿ, ಹಿರೇಮಾದಾಪುರ, ಕುಡಪಲಿ, ಎಡಗೋಡು, ಬಡಾಸಂಗಾಪುರ, ರಾಣೇಬೆನ್ನೂರು ತಾಲ್ಲೂಕಿನ ಕೂಲಿ, ಹಿರೇಮಾಗನೂರು, ಚಿಕ್ಕಮಾಗನೂರು, ನಿಟ್ಟೂರು, ಗೋಡಿಹಾಳ, ಕುಪ್ಪೇಲೂರು, ನಂದಿಹಳ್ಳಿ, ಲಿಂಗದಹಳ್ಳಿ, ಮುಷ್ಟೂರು, ಮಣಕೂರು, ಹೊಳೆ ಆನ್ವೇರಿ ಮುಂತಾದ ಕುಮದ್ವತಿ ಅವಲಂಬಿತ ಗ್ರಾಮಗಳ ಜನರು ಬದುಕು ಬರಡಾಗುವಂತಾಗಿದೆ.

## ನಗರಕ್ಕೆ ಇಂದು ಆರೋಗ್ಯ ಸಚಿವ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

10.30 ಕ್ಕೆ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆಯಲಿರುವ ವಿಶ್ವ ಜನಸಂಖ್ಯಾ ದಿನ-2024 ಕಾರ್ಯಕ್ರಮಕ್ಕೆ ಸಚಿವರು ಚಾಲನೆ ನೀಡುವರು.

ನಂತರ ಮಧ್ಯಾಹ್ನ 12.30 ಕ್ಕೆ ಆರೋಗ್ಯ ಇಲಾಖಾ ವ್ಯಾಪ್ತಿಯ ಆಸ್ಪತ್ರೆಗಳಿಗೆ ಭೇಟಿ ಮತ್ತು ಪರಿಶೀಲನೆ ಮಾಡುವ ಸಚಿವರು, ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸುವರು.

## ರಾಣೇಬೆನ್ನೂರಿನಲ್ಲಿ ಆರೋಗ್ಯ ತಪಾಸಣೆ

ರಾಷ್ಟ್ರೀಯ ವೈದ್ಯ ದಿನಾಚರಣೆ ಪ್ರಯುಕ್ತ ಭಾರತೀಯ ವೈದ್ಯ ಮಂಡಳಿ, ದಾವಣಗೆರೆ ಎಸ್ ಎಸ್ ಆಸ್ಪತ್ರೆ, ವರ್ತಕರ ಸಂಘ, ಎಪಿಎಂಸಿ, ಹಮಾಲರ ಸಂಘ ಒಟ್ಟಾಗಿ ಬ್ಯಾಂಕ್ ಹತ್ತಿರ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಸಲಿದೆ.

## ತಾಲ್ಲೂಕು ವೀರಶೈವ ಮಹಾಸಭಾ ಅಧ್ಯಕ್ಷರಾಗಿ ಶಂಭು ಉರೇಕೊಂಡಿ



ದಾವಣಗೆರೆ, ಜು. 10 - ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ತಾಲ್ಲೂಕು ಅಧ್ಯಕ್ಷರಾಗಿ ಶಂಭು ಎಸ್. ಉರೇಕೊಂಡಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸ್ಥಾನಕ್ಕೆ ಬಿ.ಎಂ. ರವಿ ಆವರಗೊಳ್ಳ, ಕೆ.ಎಂ. ಚನ್ನಪ್ಪ ಗುಮ್ಮನೂರು, ಪಿ.ಜಿ. ರಾಜಶೇಖರ್, ಮಲ್ಲಿಕಾರ್ಜುನ್ ಕಟ್ಟಿಮನಿ, ಕಾರ್ತಿಕ್ ಹಿರೇಮಠ್, ಪ್ರಭುಕುಮಾರ್ ಎಂ.ಎನ್. ಗೌಡ್ರು, ಎಸ್.ಆರ್. ಶಿವಕುಮಾರ್, ಬಸವರಾಜ್ ಗುಡಿಹಳ್ಳಿ, ಗುರುಶಾಂತ ವಿ. ಸೋಗಿ, ಬಿ.ಆರ್. ಅನಿಲ್, ಎಂ.ಎನ್. ಶಿವಾನಂದ್, ಎನ್.ಎ. ಸುನಿಲ್, ಕೆ.ಎಸ್. ನವೀನ್ ಹಾಗೂ ಕಾರ್ಯಕಾರಿ ಸಮಿತಿ ಮಹಿಳಾ ಸದಸ್ಯರಾಗಿ ಸುಮಿತ್ರ, ಪ್ರಭಾದೇವಿ ಜಯದೇವ, ಕೆ. ಕಾವ್ಯ, ಸುನೀತ, ನೀಲಗುಂದ ಜಯ್ಯಮ್ಮ, ಕೆ.ಇ. ಅನುಷಾ, ಸಿ.ಜೆ. ಶಾಂತ ಅವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ದಾವಣಗೆರೆ ತಾಲ್ಲೂಕು ಅಖಿಲ ಭಾರತ ವೀರಶೈವ ಮಹಾಸಭಾದ ಉಪ ಚುನಾವಣಾಧಿಕಾರಿ ವಿ. ಶಿವಮೂರ್ತಿಸ್ವಾಮಿ ತಿಳಿಸಿದ್ದಾರೆ.

## ಮಹೇಂದ್ರನಾಥ್ ಬೆಳವನೂರು ಗ್ರಾ.ಪಂ. ಉಪಾಧ್ಯಕ್ಷ



ದಾವಣಗೆರೆ,ಜು.10- ತಾಲ್ಲೂಕಿನ ಬೆಳವನೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಬಿ.ವೈ. ಮಹೇಂದ್ರನಾಥ್ ಅವರು ಇಂದು ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಐಟಿಬಿಪಿಯಿಂದ 108 ಕೆ.ಜಿ. ಬಂಗಾರ ವಶ




ಲೇಹ್, ಜು. 10 - ಭಾರತ ಚೀನಾ ವಾಸ್ತವಿಕ ಗಡಿ ರೇಖೆ ಬಳಿ 108 ಕೆಜಿ ಬಂಗಾರವನ್ನು ಇಂಡೋ ಟಿಬೆಟಿಯನ್ ಗಡಿ ಪೊಲೀಸರು (ಐ.ಟಿ.ಬಿ.ಪಿ.) ವಶಪಡಿಸಿಕೊಂಡಿದ್ದಾರೆ. ಒಟ್ಟು 108 ಬಂಗಾರದ ಗಟ್ಟಿಗಳನ್ನು ವಶಪಡಿಸಿಕೊಳ್ಳಲಾಗಿದ್ದು ಪ್ರತಿಯೊಂದು ಗಟ್ಟಿ ಒಂದು ಕೆಜಿ ತೂಕದ್ದಾಗಿವೆ.

ಕಳ್ಳಸಾಗಣೆ ಮಾಡಲಾಗುತ್ತಿದ್ದ ಬಂಗಾರದ ಜೊತೆಗೆ ಎರಡು ಮೊಬೈಲ್ ಫೋನ್, ಒಂದು ಬೈನಾಕ್ಯುಲರ್, ಎರಡು ಚಾಕು ಹಾಗೂ ಹಲವಾರು ಚೀನಾ ಆಹಾರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐ.ಟಿ.ಬಿ.ಪಿ. ಇತಿಹಾಸದಲ್ಲಿ ಇಷ್ಟು ಪ್ರಮಾಣದ ಬಂಗಾರದ ವಶಪಡಿಸಿಕೊಂಡಿರುವುದು ಇದೇ ಮೊದಲು. ವಶಪಡಿಸಿಕೊಂಡಿರುವ ಬಂಗಾರವನ್ನು ಸುಂಕ ಇಲಾಖೆಗೆ ವರ್ಗಾಯಿಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

## ರೋಟರ್‍ಯಾಕ್ಟ್ ಅಧ್ಯಕ್ಷರಾಗಿ ನೇಹಾ



ದಾವಣಗೆರೆ, ಜು.10 - ನಗರದ ರೋಟರ್‍ಯಾಕ್ಟ್ ಕ್ಲಬ್ ಆರ್‌ಜಿಐಸಿಎಂ ಸಂಸ್ಥೆ ಅಧ್ಯಕ್ಷರಾಗಿ ಚನ್ನಗಿರಿ ಮನೆತನದ ಕು. ನೇಹಾ ಚನ್ನಗಿರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

### ಭದ್ರಾ ಜಲಾಶಯ



ನೀರಿನ ಮಟ್ಟ : 135 ಅಡಿ 2 ಇಂಚು
ಒಳ ಹರಿವು : 7356 ಕ್ಯೂಸೆಕ್ಸ್
ಹೊರ ಹರಿವು : 157 ಕ್ಯೂಸೆಕ್ಸ್
ಕಳೆದ ವರ್ಷ : 140 ಅಡಿ 9 ಇಂಚು

## ರಾಹುಲ್ ವಿರುದ್ಧದ ಹೇಳಿಕೆ ಶಾಸಕ ಭರತ್ ಶೆಟ್ಟಿ ವಿರುದ್ಧ ಪ್ರಕರಣ

ಮಂಗಳೂರು, ಜು. 10 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಿಜೆಪಿ ಶಾಸಕ ಭರತ್ ಶೆಟ್ಟಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಮಂಗಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ಅವರು ಈ ವಿಷಯ ತಿಳಿಸಿದ್ದಾರೆ.

ಮಂಗಳೂರು ನಗರ ಪಾಲಿಕೆಯ ಕಾಂಗ್ರೆಸ್ ಸದಸ್ಯ ಕೆ. ಅನಿಲ್ ಅವರು ನೀಡಿದ ದೂರು ಆಧರಿಸಿ ಕವೂರ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.


**ಬೇಕಾಗಿದ್ದಾರೆ**

ಕರ್ನಾಟಕದಾದ್ಯಂತ ಬೆಳೆಯುತ್ತಿರುವ ISO CERTIFIED ಕಂಪನಿ ಇದೀಗ ದಾವಣಗೆರೆಯಲ್ಲಿ, ಟೆಲಿಕಾಲಿಂಗ್ ಕೆಲಸಕ್ಕೆ 500 + (ಹುಡುಗ / ಹುಡುಗಿಯರು) ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

+ 9187925 09454
+ 9187927 68154



**ಹೃದಯಪೂರ್ವಕ ಅಭಿನಂದನೆಗಳು**



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಪದಾಧಿಕಾರಿಯಾಗಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಲು ಮಾರ್ಗದರ್ಶನ ಮಾಡಿದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ, ಹಿರಿಯ ಶಾಸಕರೂ, ಮುತ್ಸದ್ದಿಗಳೂ, ಸಮಾಜ ಸುಧಾರಕರೂ ಆದ

ಡಾ. ಶಾಮನೂರು ಶಿವಶಂಕರಪ್ಪಾಜಿ ಅವರಿಗೆ ಅನಂತ-ಅನಂತ ಕೃತಜ್ಞತೆಗಳು.

ಈ ಕಾರ್ಯಕ್ಕೆ ಪ್ರೋತ್ಸಾಹ ನೀಡಿದ ಮಹಾಸಭಾದ ಎಲ್ಲಾ ಹಿರಿಯರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು.



ಎ.ಸಿ. ಪಾಟೀಲ್, ತ್ಯಾವಣಿಗೆ
ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಕಾರ್ಯನಿರ್ವಾಹಕ ಸಮಿತಿ ಸದಸ್ಯ



ಟಿ.ಎನ್. ಪ್ರಭಾಕರ್, ತ್ಯಾವಣಿಗೆ

ಟಿ.ಎಸ್. ಚಂದ್ರಶೇಖರ್, ತ್ಯಾವಣಿಗೆ





**ಹತ್ತನೇ ವರ್ಷದ ಪುಣ್ಯಸ್ಮರಣೆ**



ದಿ|| ಡಾ|| ಶ್ರೀ ಎಂ.ಹೆಚ್. ರಮೇಶ್‌ರವರು

ಜನನ : 1965 - ಮರಣ : 2014

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು...

ನಿಮ್ಮ ಪ್ರೀತಿ ಮತ್ತು ಜೀವನ ಮೌಲ್ಯಗಳು ಸದಾಕಾಲ ಉತ್ತಮ ಕಾರ್ಯ, ಸೇವೆಗಳನ್ನು ಮಾಡಲು ನಮಗೆ ಸ್ಫೂರ್ತಿ ಮತ್ತು ಮಾರ್ಗದರ್ಶನ... ನಿಮ್ಮನ್ನು ಚಿರಕಾಲ ನೆನೆಯುತ್ತಿರುವ...

ಕುಟುಂಬ ಬಳಗದವರು ಹಾಗೂ
ಶ್ರೀ ರಾಘವೇಂದ್ರ ಆಸ್ಪತ್ರೆಯ ಸಿಬ್ಬಂದಿ ವರ್ಗದವರು
ಜಗಳೂರು.



**ಹೃದಯ ಪೂರ್ವಕ ಅಭಿನಂದನೆಗಳು**




ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ದಾವಣಗೆರೆ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ

ಐಗೂರು ಸಿ. ಚಂದ್ರಶೇಖರ್

ಅವರಿಗೆ ನಮ್ಮೆಲ್ಲರ ಹೃದಯಪೂರ್ವಕ ಅಭಿನಂದನೆಗಳು.




ಐಗೂರು ಹನುಮಂತಪ್ಪ


ಐಗೂರು ಶಿವಶಂಕರ್


ಐಗೂರು ಸುರೇಶ್


ಐಗೂರು ಪ್ರಭು


ಐಗೂರು ಪವನ್


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas